03 January 2026 Saturday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ
info.varthaman@gmail.com

**ಭಾವನಾಂತರಂಗ**

ನಾವು ಒಬ್ಬರಿಂದ ಮೋಸ ಹೋಗುವುದು ನಮ್ಮಲ್ಲಿರುವ ಅರೆ ತಿಳುವಳಿಕೆಯಿಂದಲೇ ಹೊರತು ಮೋಸ ಮಾಡಿದವರಿಂದಲ್ಲ!
-ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ನೀವು ಮುಚ್ಚಿಡುವ ಸತ್ಯ ನಿಮ್ಮನ್ನು ನಿದ್ದೆಯಿಂದ ದೂರ ವಿಡುತ್ತದೆ ನೀವು ಹೇಳುವ ಸತ್ಯ ನಿಮ್ಮನ್ನು ಇತರರಿಂದ ದೂರವಿಡುತ್ತದೆ
ಮೈಲಾರ ಸಾವಿತ್ರಿಬಾಯಿ

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 69 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಚುನಾವಣಾ ರಾಜಕೀಯಕ್ಕೆ ಎಸ್.ಎ.ರಾಮದಾಸ್ ಭಾವುಕ ವಿದಾಯ

**ಮೈಸೂರು:** ಬಿಜೆಪಿಯಲ್ಲಿ 32 ವರ್ಷಗಳಿಂದ ರಾಜಕೀಯ ಮಾಡಿದ ಮಾಜಿ ಸಚಿವ ಎಸ್.ಎ.ರಾಮದಾಸ್ ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಣೆ ಮಾಡಿಕೊಂಡಿದ್ದಾರೆ. ಈ ಭಾಗದ ಹಿರಿಯ ರಾಜಕಾರಣಿ ರಾಜಕೀಯ ಕ್ಷೇತ್ರಕ್ಕೆ ಭಾವುಕ ವಿದಾಯ ಹೇಳಿದ್ದಾರೆ.

ನಗರದಲ್ಲಿ ಶುಕ್ರವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಅವರು, ನನಗೆ ಚುನಾವಣಾ ರಾಜಕೀಯ ಸಾಕಾಗಿದೆ. ಚುನಾವಣಾ ರಾಜಕೀಯ ಮಾಡುವುದಿಲ್ಲ. ಆದರೆ, ನಾನು ಬಿಜೆಪಿ ಬಿಡುವುದಿಲ್ಲ. ಪರಿಸರ ಉಳಿಸುವ ನಿಟ್ಟಿನಲ್ಲಿ ಸಮಾಜ ಸೇವೆ ಮುಂದುವರಿಸುತ್ತೇನೆ ಎಂದು ತಿಳಿಸಿದರು.

ಸುತ್ತೂರು ಸ್ವಾಮೀಜಿ ಸೇರಿದಂತೆ ನನ್ನನ್ನು ಹತ್ತಿರದಿಂದ ಬಲ್ಲ ಅನೇಕರು ನೀವು ಮತ್ತೆ ಸಕ್ರಿಯವಾಗಿ ಸಮಾಜದ ಜತೆ ಇರಬೇಕು ಎಂದು ಹೇಳಿದ್ದಾರೆ. ಶೀರ್ಘದಲ್ಲೇ ಪರಿಸರ ಸಂರಕ್ಷಣಾ ಕಾರ್ಯದ ಮೂಲಕ ಸಾಮಾಜಿಕವಾಗಿ ತೊಡಗಿಸಿಕೊಳ್ಳುತ್ತೇನೆ ಎಂದರು.



**ರಾಜಕೀಯ ಹಾದಿ**

**1995ರಿಂದ 1997ರವರೆಗೆ ಮತ್ತು 1997ರಿಂದ 2000ದವರೆಗೆ ಎರಡು ಬಾರಿ ರಾಜ್ಯ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ, ಬಿಜೆಪಿ ರಾಷ್ಟ್ರೀಯ ಪರಿಷತ್ ಸದಸ್ಯರಾಗಿ ಸೇವೆ. 1994ರಲ್ಲಿ ಕೃಷ್ಣರಾಜ ಕ್ಷೇತ್ರದಲ್ಲಿ ಸ್ಪರ್ಧಿಸಿ 9500 ಮತಗಳಿಂದ ಶಾಸಕರಾಗಿ ಆಯ್ಕೆ. 1999, 2008 ಮತ್ತು 2013ರಲ್ಲಿ ವಿಧಾನ ಸಭೆಗೆ ಮರು ಆಯ್ಕೆ. 2008ರಲ್ಲಿ ಮುಖ್ಯಮಂತ್ರಿ ಸಂಸದೀಯ ಕಾರ್ಯದರ್ಶಿಯಾಗಿ ನೇಮಕ. 2010ರಲ್ಲಿ ಯಡಿಯೂರಪ್ಪ ಸಂಪುಟದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ. 2004ರಲ್ಲಿ ಕಾಂಗ್ರೆಸ್ ಎದುರು ಸೋಲು 2013ರಲ್ಲಿಯೂ ಬಿಜೆಪಿ-ಕೆಜೆಪಿ ಇಬ್ಭಾಗದಿಂದ**

ಪುಟ 2ಕ್ಕೆ

ಈ ಹಿಂದೆ ಜನೌಷಧಿ ಕೇಂದ್ರ ತೆರೆದಾಗ ಔಷಧಿ ಕಂಪನಿಗಳು ಲಾಬಿ ಮಾಡಿದವು. ರಾಜ್ಯದ ವಿವಿಧೆಡೆ ನನ್ನ ವಿರುದ್ಧ ಪ್ರತಿಭಟನೆ ನಡೆಸಿದರು. ಆದರೆ ಎದೆಗುಂದಲಿಲ್ಲ. ಬಳಿಕ ಅದು ಎಷ್ಟು ಜನಪ್ರಿಯವಾಯಿತೆಂದರೆ ದೇಶದಾದ್ಯಂತ ಸಾವಿರಾರು ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳು ಆರಂಭವಾದವು ಎಂದರು.

ಶ್ರೀರಾಮನಿಗೆ ನಾಳೆ ಪಟ್ಟಾಭಿಷೇಕ ಆಗಬೇಕಿತ್ತು. ಹಿಂದಿನ ರಾತ್ರಿ ದಶರಥನ ಮೂಲಕ ಕಾಡಿಗೆ ಹೋಗುವಂತೆ ಹೇಳಿಸಲಾಯಿತು. ಅಂತಹ ಶ್ರೀರಾಮಚಂದ್ರನೇ ಮರು ಮಾತನಾಡದೇ ಕಾಡಿಗೆ ಹೊರಟು ಹೋದ. ನಾನು ರಾಮದಾಸ, ನಾನೇನು ಮಾಡಲಿ. ಭಾರತೀಯ ಜನತಾ ಪಕ್ಷ ನನಗೆ ತಾಯಿ ಇದ್ದಂತೆ. ಯಾವುದೇ ಕಾರಣಕ್ಕೂ ತಾಯಿಗೆ ದ್ರೋಹ ಮಾಡುವುದಿಲ್ಲ ಎಂದು ಅನೇಕ ಬಾರಿ ಹೇಳಿದ್ದೇನೆ. ಈಗಲೂ ಅದನ್ನೇ ಹೇಳುತ್ತಿದ್ದೇನೆ. ಯಾವುದೇ ಕಾರಣಕ್ಕೂ ಬಿಜೆಪಿ ಬಿಡುವುದಿಲ್ಲ ಎಂದು ಹೇಳಿದರು.

ಪುಟ 2ಕ್ಕೆ

**ಕುಟುಂಬದ ಆಸ್ತಿ ನನ್ನದಲ್ಲ**

**ಅವರಿಗೇನು ಕೊರತೆ, ಅರ್ಧ ಮೈಸೂರು ಅವರದ್ದು ಅಂತೆಲ್ಲ ಜನ ಮಾತನಾಡಿಕೊಳ್ಳುತ್ತಾರೆ. ನನ್ನ ಕುಟುಂಬದಲ್ಲಿ ಉದ್ಯಮಿಗಳಿದ್ದಾರೆ, ಅದರಲ್ಲಿ ತಪ್ಪೇನು? ಅವರ ಬಳಿ ಇರುವ ಯಾವುದೇ ಆಸ್ತಿ ನನ್ನದಲ್ಲ. ಮಾಸಿಕ 1.50 ಲಕ್ಷ ರೂ. ನಿವೃತ್ತ ವೇತನ ಬರುತ್ತದೆ. ನನ್ನ ಜೀವನಕ್ಕೆ ಅಷ್ಟು ಸಾಕು ಎಂದು ರಾಮದಾಸ್ ಹೇಳಿದರು.**

## ರೆಡ್ಡಿಗಳ ರಾಜಕೀಯಕ್ಕೆ 'ಚೆಲ್ಲಿದ ರಕ್ತ'

### ಬಳ್ಳಾರಿ 'ರಿಪಬ್ಲಿಕ್'ನಲ್ಲಿ ರಕ್ತಸಿಕ್ತ ರಾಜಕೀಯ | 11 ಜನರ ವಿರುದ್ಧ ಎಫ್ಐಆರ್ ದಾಖಲು

**ಬಳ್ಳಾರಿ:** ಬಳ್ಳಾರಿಯಲ್ಲಿ ಗುಂಡಿನ ಮೊರೆತ ಕೇಳಿ ಬಂದಿದೆ. ಬಳ್ಳಾರಿಯ ಕಾಂಗ್ರೆಸ್ ಮತ್ತು ಬಿಜೆಪಿ ರೆಡ್ಡಿಗಳ ರಾಜಕೀಯ ಅಟ್ಟಹಾಸಕ್ಕೆ ಕಾಂಗ್ರೆಸ್ ಕಾರ್ಯಕರ್ತ ಬಲಿಯಾಗಿದ್ದಾರೆ. ಈ ಸಂಬಂಧ 11 ಜನರ ವಿರುದ್ಧ ದೂರು ದಾಖಲಾಗಿದೆ.

ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಮತ್ತು ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ನಡುವಿನ ವೈಷಮ್ಯಕ್ಕೆ ಅಕ್ಷರಶಃ ತೆಲುಗು ಸಿನಿಮಾದ ಮಾದರಿಯಲ್ಲಿ ರಣರಂಗ ನಿರ್ಮಾಣವಾಗಿತ್ತು. ಒಬ್ಬನನ್ನು ಬಲಿಪಡೆದ ನಂತರ ಬಳ್ಳಾರಿ ಈಗ ಬೂದಿ ಮುಚ್ಚಿದ ಕೆಂಡದಂತಿದೆ. ಸದ್ಯ ಬಳ್ಳಾರಿಯಲ್ಲಿ ಸೆಕ್ಷನ್ 144 ಜಾರಿ ಮಾಡಲಾಗಿದೆ.

ಬ್ಯಾನರ್ ಕಟ್ಟುವ ವಿಚಾರವಾಗಿ ನಡೆದ ಗಲಾಟೆ ವಿಕೋಪಕ್ಕೆ ತಿರುಗಿ ಕಾಂಗ್ರೆಸ್ ಕಾರ್ಯಕರ್ತ ಗುಂಡೇಟಿಗೆ ಬಲಿಯಾದ ಘಟನೆಗೆ ಸಂಬಂಧಿಸಿದಂತೆ ಬಳ್ಳಾರಿ ಶಾಸಕ ಎನ್.ಭರತ್ ರೆಡ್ಡಿ ಆಪ್ತ ಸಹಾಯಕ ಚಾನೆಲ್ ಶೇಖರ್ ನೀಡಿದ ದೂರಿನ ಆಧಾರದ ಮೇಲೆ ಶುಕ್ರವಾರ ಎಫ್ಐಆರ್ ದಾಖಲಿಸಲಾಗಿದೆ.

ಎಫ್ಐಆರ್‌ನಲ್ಲಿ ಜನಾರ್ದನ ರೆಡ್ಡಿ ಅವರನ್ನು ಮೊದಲ ಆರೋಪಿ ಮಾಡಲಾಗಿದೆ. ಮಾಜಿ ಶಾಸಕ ಜಿ.ಸೋಮಶೇಖರ ರೆಡ್ಡಿ ಅವರನ್ನು ಎರಡನೇ ಆರೋಪಿಯನ್ನಾಗಿ ಹೆಸರಿಸಲಾಗಿದೆ. ಶಾಸಕ ಮತ್ತು ಮಾಜಿ ಸಚಿವ ಬಿ.ಶ್ರೀರಾಮುಲು ಮೂರನೇ ಆರೋಪಿ. ಬಳ್ಳಾರಿ ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೋತ್ಕರ್ ನಾಲ್ಕನೇ ಆರೋಪಿ. ಎಫ್ಐಆರ್‌ನಲ್ಲಿ 11 ಜನರನ್ನು ಹೆಸರಿಸಲಾಗಿದೆ.

ಪುಟ 2ಕ್ಕೆ



**ತನಿಖೆಗೆ ಆದೇಶ: ಪರಂ**

ಬೆಂಗಳೂರು: ಬಳ್ಳಾರಿಯಲ್ಲಿ ನಡೆದಿರುವ ಹಿಂಸಾಚಾರ ಪ್ರಕರಣದ ಕುರಿತು ತನಿಖೆಗೆ ಆದೇಶಿಸಿದ್ದೇನೆ. ಚಿತ್ರದುರ್ಗ ದಾವಣಗೆರೆಯಿಂದ ಹೆಚ್ಚುವರಿ ಪಡೆಗಳನ್ನು ನಿಯೋಜಿಸಲಾಗಿದೆ. ಪರಿಸ್ಥಿತಿ ಈಗ ಶಾಂತಿಯುತವಾಗಿದೆ ಎಂದು ಗೃಹ ಸಚಿವ ಪರಮೇಶ್ವರ್ ತಿಳಿಸಿದರು. ಪ್ರಕರಣದಲ್ಲಿ ಕೆಲವರನ್ನು ಬಂಧಿಸಲಾಗಿದೆ. ಪೂರ್ಣ

ಪುಟ 2ಕ್ಕೆ

**ಖಾಸಗಿ ಗುಂಡು ತಗುಲಿ ವ್ಯಕ್ತಿ ಸಾವು: ಎಸ್‌ಪಿ ರಂಜಿತ್**

**ಬಳ್ಳಾರಿ:** ಬ್ಯಾನರ್ ಅಳವಡಿಕೆ ವಿಚಾರದಲ್ಲಿ ನಡೆದ ಗಲಾಟೆಯಲ್ಲಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತನ ದೇಹ ಹೊಕ್ಕಿರುವುದು ಪೊಲೀಸ್ ಇಲಾಖೆ ಬುಲೆಟ್ ಅಲ್ಲ ಎಂದು ಎಸ್‌ಪಿ ರಂಜಿತ್ ಕುಮಾರ್ ಭಂಡಾರು ಸ್ಪಷ್ಟಪಡಿಸಿದರು.

ಮಾಧ್ಯಮಗಳ ಜೊತೆ ಶುಕ್ರವಾರ ಮಾತನಾಡಿದ ಅವರು, ಮೃತ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ದೇಹ ಹೊಕ್ಕಿದ್ದು ಖಾಸಗಿ ವ್ಯಕ್ತಿಯ ರಿವಾಲ್ವರ್‌ನಿಂದ ಸಿಡಿದಿರುವ ಬುಲೆಟ್. ನಿನ್ನೆ ಗಲಾಟೆ ವೇಳೆ ರಾಜಶೇಖರ ಸಾವಾಗಿದೆ. ಪೊಲೀಸರು ಫೈರ್ ಮಾಡಿದಾಗ ತಗುಲಿರುವ ಬುಲೆಟ್ ಅಲ್ಲ. ಅದು ಖಾಸಗಿ ರಿವಾಲ್ವಾರ್ ಬುಲೆಟ್ ಎಂದು ಎಸ್‌ಪಿ ತಿಳಿಸಿದ್ದಾರೆ.




ಇದರ ಬಗ್ಗೆ ತನಿಖೆ ನಡೆಯುತ್ತಿದೆ. ಮಾಹಿತಿ ಸಂಗ್ರಹಿಸ್ತಿದ್ದೇವೆ. ಸಿಸಿ ಕ್ಯಾಮೆರಾಗಳ ಪರಿಶೀಲನೆಯನ್ನೂ ಮಾಡ್ತೇವೆ. ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಭರತ್ ರೆಡ್ಡಿ ಬೆಂಬಲಿಗರು ನಾಲ್ಕು ಕೇಸ್ ದಾಖಲಿಸಿದ್ದಾರೆ. ಖಾಸಗಿ ವ್ಯಕ್ತಿ ಫೈರ್ ಮಾಡಿರುವ

ಪುಟ 2ಕ್ಕೆ

**ಬಳ್ಳಾರಿ ಎಸ್ಪಿ ಪವನ್ ನೆಜ್ಜೂರ್ ಅಮಾನತು**

ಬೆಂಗಳೂರು: ಬಳ್ಳಾರಿಯಲ್ಲಿ ಬ್ಯಾನರ್ ಕಟ್ಟುವ ವಿಚಾರವಾಗಿ ನಡೆದ ಗಲಾಟೆ ವಿಕೋಪಕ್ಕೆ ತಿರುಗಿ ಕಾಂಗ್ರೆಸ್ ಕಾರ್ಯಕರ್ತ ಗುಂಡೇಟಿಗೆ ಬಲಿಯಾದ ಘಟನೆಗೆ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪವನ್ ನೆಜ್ಜೂರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ರಾಜ್ಯ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದೆ. ಬ್ಯಾನರ್ ಗಲಾಟೆಯನ್ನು ಸರಿಯಾಗಿ ನಿಭಾಯಿಸಿಲ್ಲ ಮತ್ತು ಘಟನೆಯ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಸೂಕ್ತ ಮಾಹಿತಿ ನೀಡಿಲ್ಲ ಎಂಬ ಕಾರಣ ನೀಡಿ, ನಿನ್ನೆಯಷ್ಟೇ ಬಳ್ಳಾರಿ ಎಸ್ಪಿಯಾಗಿ ಅಧಿಕಾರ ವಹಿಸಿಕೊಂಡಿದ್ದ ಪವನ್ ನೆಜ್ಜೂರ್ ಅವರನ್ನು ಅಮಾನತುಗೊಳಿಸಲಾಗಿದೆ. ವಿಜಯನಗರ ಲೋಕಾಯುಕ್ತದಲ್ಲಿ ಎಸ್ಪಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಪವನ್ ನೆಜ್ಜೂರ್ ಅವರನ್ನು ಕಳೆದ ಡಿಸೆಂಬರ್ 31 ರಂದು ಬಳ್ಳಾರಿ ಎಸ್ ಪಿಯಾಗಿ ರಾಜ್ಯ ಸರ್ಕಾರ ವರ್ಗಾವಣೆ ಮಾಡಿತ್ತು. ಕಳೆದ ಒಂದೂವರೆ ವರ್ಷದಿಂದ




ಪುಟ 2ಕ್ಕೆ

## ಏ.22ರಿಂದ ಸಿಇಟಿ ಪರೀಕ್ಷೆ

**ಬೆಂಗಳೂರು:** ವೃತ್ತಿಪರ ಕೋರ್ಸ್‌ಗಳಿಗೆ ನಡೆಯುವ ಸಿಇಟಿ 2026ರ ವೇಳಾಪಟ್ಟಿ ಪ್ರಕಟವಾಗಿದೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ ಸುಧಾಕರ್ ಮತ್ತು ವೈದ್ಯಕೀಯ ಸಚಿವ ಶರಣು ಪ್ರಕಾಶ್ ಪಾಟೀಲ್ ಅವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಚೇರಿಯಲ್ಲಿ ವೇಳಾಪಟ್ಟಿ ಪ್ರಕಟಿಸಿದರು.

ಏ.22ರಿಂದ 24ರವರೆಗೆ ಪರೀಕ್ಷೆಗಳು ನಡೆಯಲಿವೆ. ಜನವರಿ 17ರಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಪ್ರಾರಂಭ ಆಗಲಿದೆ. ಇದೇ ವೇಳೆ ಸಿಇಟಿ ವೇಳಾಪಟ್ಟಿ ಜೊತೆಗೆ ಪಿಜಿಸಿಇಟಿ, ಕೆಸೆಟ್ ಪರೀಕ್ಷೆಗಳಿಗೂ ವೇಳಾಪಟ್ಟಿ ಪ್ರಕಟ ಮಾಡಿದರು. ಅರ್ಜಿ ಸಲ್ಲಿಕೆಗೆ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಮಾಹಿತಿಯುಳ್ಳ ವಿದ್ಯಾರ್ಥಿ ದಿಕ್ಸೂಚಿಯನ್ನು ಬಿಡುಗಡೆ ಮಾಡಿದರು.



**ಸಿಇಟಿ ವೇಳಾಪಟ್ಟಿ**

- **ಜನವರಿ 17– ಅರ್ಜಿ ಸಲ್ಲಿಕೆ ಪ್ರಾರಂಭ.**
- **ಏಪ್ರಿಲ್ 22– ಹೊರನಾಡು, ಗಡಿನಾಡು ಕನ್ನಡಿಗರಿಗೆ ಕನ್ನಡ ಪರೀಕ್ಷೆ**
- **ಏಪ್ರಿಲ್ 23– ಭೌತಶಾಸ್ತ್ರ, ರಸಾಯನಶಾಸ್ತ್ರ**
- **ಏಪ್ರಿಲ್ 24– ಗಣಿತ, ಜೀವಶಾಸ್ತ್ರ**

## ವಿಜಯಲಕ್ಷ್ಮಿಗೆ ಅಶ್ಲೀಲ ಪೋಸ್ಟ್: ಇಬ್ಬರ ಬಂಧನ

**ಬೆಂಗಳೂರು:** ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ಬಗ್ಗೆ ಅಶ್ಲೀಲ ಮತ್ತು ಅವಹೇಳನಕಾರಿ ಪೋಸ್ಟ್ ಮಾಡಿದ್ದ ಆರೋಪದಡಿ ಬೆಂಗಳೂರು ಪೊಲೀಸರು ಸಾಫ್ಟ್‌ವೇರ್ ಎಂಜಿನಿಯರ್ ಮತ್ತು ಆಟೋ ರಿಕ್ಷಾ ಚಾಲಕನನ್ನು ಬಂಧಿಸಿದ್ದಾರೆ. ಬೆಂಗಳೂರಿನ ಚಿಕ್ಕಬಾಣಾವರ ನಿವಾಸಿ ಆಟೋ ರಿಕ್ಷಾ ಚಾಲಕ ಚಂದ್ರಶೇಖರ್ (45) ಮತ್ತು ದಾವಣಗೆರೆಯ ಸಾಫ್ಟ್‌ವೇರ್ ಎಂಜಿನಿಯರ್ ನಿತಿನ್ (31) ಬಂಧಿತ ಆರೋಪಿಗಳು.




ಕೆಲವು ವ್ಯಕ್ತಿಗಳು ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಮತ್ತು ಅವರ ಕುಟುಂಬದ ವಿರುದ್ಧ ಕೀಳು ಮಟ್ಟದ ಅಶ್ಲೀಲ, ಅವಹೇಳನಕಾರಿ ಪೋಸ್ಟ್‌ಗಳು, ಕಾಮೆಂಟ್‌ಗಳು ಮತ್ತು ಸಂದೇಶಗಳನ್ನು ಪೋಸ್ಟ್ ಮಾಡುತ್ತಿದ್ದಾರೆ ಎಂದು ವಿಜಯಲಕ್ಷ್ಮಿ ಅವರು ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ತನಿಖೆ ಮುಂದುವರಿದಿದ್ದು ಉಳಿದ ಆರೋಪಿಗಳಿಗಾಗಿ ಹುಡುಕಾಟ ಮುಂದುವರೆದಿದೆ ಎಂದು ನಗರ ಪೊಲೀಸರು ತಿಳಿಸಿದ್ದಾರೆ. ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ

ಪುಟ 2ಕ್ಕೆ

## ಫೆ.23ಕ್ಕೆ ಆದಿಚುಂಚನಗಿರಿಗೆ ಪ್ರಧಾನಿ ಮೋದಿ ಭೇಟಿ

**ಮಂಡ್ಯ:** ಪ್ರಧಾನಿ ನರೇಂದ್ರ ಮೋದಿ ಅವರು ಇದೇ ಫೆ.23ಕ್ಕೆ ಆದಿಚುಂಚನಗಿರಿಗೆ ಭೇಟಿ ನೀಡಲಿದ್ದಾರೆ. ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಗೆ ಪ್ರಧಾನಿ ಭೇಟಿ ನೀಡಿ, ಬಾಲಗಂಗಾಧರನಾಥ ಶ್ರೀಗಳ ಗದ್ದುಗೆ ಉದ್ಘಾಟನೆ ಮಾಡಲಿದ್ದಾರೆ. ಬಳಿಕ ನಿರ್ಮಲಾನಂದನಾಥ ಶ್ರೀಗಳ ವಾರ್ಷಿಕ ಪಟ್ಟಾಭಿಷೇಕದಲ್ಲಿ ಭಾಗಿಯಾಗಲಿದ್ದಾರೆ. ಇದೇ ವೇಳೆ ಶ್ರೀಕ್ಷೇತ್ರ ಆದಿಚುಂಚನಗಿರಿ ಹಾಗೂ ಧಾರ್ಮಿಕ ವಿಚಾರವಾಗಿ ಪ್ರಧಾನಿ ಮೋದಿ ಭಾಷಣ ಮಾಡಲಿದ್ದಾರೆ. ಚುಂಚನಗಿರಿ ಶ್ರೀಗಳು ಮೋದಿ ಪ್ರವಾಸದ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡಲಿದ್ದಾರೆ.



## ಜನಾರ್ದನ ರೆಡ್ಡಿ ನೀಚ, ರಾಕ್ಷಸ, ಅಂತ್ಯ ಮಾಡ್ತೇವೆ: ಭರತ್ ರೆಡ್ಡಿ

**ಬಳ್ಳಾರಿ:** ಜನಾರ್ದನ ರೆಡ್ಡಿ ಒಬ್ಬ ನೀಚ, ರಾಕ್ಷಸ. ಅದಕ್ಕೆ ಅಂತ್ಯ ಮಾಡಿಯೇ ಮಾಡ್ತೇವೆ ಎಂದು ಶಾಸಕ ನಾರಾ ಭರತ್ ರೆಡ್ಡಿ ಏಕವಚನದಲ್ಲೇ ವಾಗ್ದಾಳಿ ನಡೆಸಿದರು.

ಬ್ಯಾನರ್ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ಹತ್ಯೆಯಾದ ವಿಚಾರವಾಗಿ ಮಾತನಾಡಿ, ಜನಾರ್ದನ ರೆಡ್ಡಿ ಜೀವಮಾನದಲ್ಲಿ ಇಂತಹದೇ ಕೆಲಸ ಮಾಡಿಕೊಂಡು ಬಂದಿದ್ದಾನೆ. ಅವರು ಹೇಳಿದ್ದಕ್ಕೆಲ್ಲ ಪ್ರತಿಕ್ರಿಯಿಸಿಲ್ಲ. ನಾವ್ಯಾರು ಜನಾರ್ದನ ರೆಡ್ಡಿ ಮನೆ ಮುಂದೆ ಬ್ಯಾನರ್ ಹಾಕಿಲ್ಲ. ಅವನೊಬ್ಬ ನೀಚ. ಅವರ ಮೇಲೆ 3 ಎಫ್ಐಆರ್ ದಾಖಲಾಗಿದೆ. ತನಿಖೆ ಬಳಿಕ ಮೇಲೆ ಮಾತನಾಡುತ್ತೇನೆ ಎಂದು ವಾಗ್ದಾಳಿ ನಡೆಸಿದರು.

ನ್ಯಾಯ ದೇವರು ಕೊಡುತ್ತಾನೆ. ಅವರು ಹೇಡಿಗಳು, ರೆಡ್ಡಿ ರಾಕ್ಷಸ. ಅದಕ್ಕೆ ಅಂತ್ಯ ಮಾಡೇ ಮಾಡ್ತೇವೆ. ನಾಳೆ ಕಾರ್ಯಕ್ರಮ ನಡೆಯಬಾರದು ಎಂಬ ದುರುದ್ದೇಶ ಇದೆ. ಅವನಿಗೆ ಶಿಕ್ಷೆ ಆಗೇ ಆಗುತ್ತದೆ ಎಂದು ಎಚ್ಚರಿಸಿದರು.

ಬ್ಯಾನರ್ ಹಾಕುವ ಸಂಬಂಧ ಬಳ್ಳಾರಿಯಲ್ಲಿ ಗಲಾಟೆ ನಡೆದಿದೆ. ಪೊಲೀಸರು ತನಿಖೆ ಮಾಡುತ್ತಿದ್ದಾರೆ. ನಾನು ಕೇಸ್ ಡೈವರ್ಟ್ ಮಾಡಲು ಹೋಗಲ್ಲ. ನಮ್ಮ ಕಾರ್ಯಕರ್ತ, ತಮ್ಮನ ಸಾವಾಗಿದೆ. ಬಳ್ಳಾರಿಯಲ್ಲಿ ಮೊದಲಿನಿಂದಲೂ ರಾಕ್ಷಸರ ಅಟ್ಟಹಾಸ ನಡಿತಾ ಇದೆ. ವಾಲ್ಮೀಕಿ ಪುತ್ಥಳಿ ಅನಾವರಣ ಕೆಡಿಸಲು ರಾಕ್ಷಸರು ಮಾಡುತ್ತಾ ಇದ್ದಾರೆ ಎಂದು ವಾಗ್ದಾಳಿ ನಡೆಸಿದರು.



ಜನಾರ್ದನ ರೆಡ್ಡಿ ಅಕ್ರಮ ಗಣಿಗಾರಿಕೆ ಇಶ್ಯೂ ಡೈವರ್ಟ್ ಮಾಡಲು ಇಂತಹ ನೀಚ ಕೃತ್ಯಕ್ಕೆ ಇಳಿದಿದ್ದಾನೆ. ಅಂತಹ ರಾಕ್ಷಸರು ಎಷ್ಟು ಜನ ಬಂದರೂ ಏನೂ ಮಾಡಲು ಆಗಲ್ಲ. ಬಳ್ಳಾರಿ ಶಾಂತಿಯುತ ವಾಗಿ ಇದೆ. 3ಎಫ್ಐಆರ್ ದಾಖಲಾಗಿವೆ. ಪೊಲೀಸರಿಂದ ತನಿಖೆ ನಡೆದಿದೆ ಎಂದು ತಿಳಿಸಿದರು.

ನಮ್ಮ ಪಕ್ಷದ ರಾಜ್ಯ ನಾಯಕರು, ಹೈಕಮಾಂಡ್, ಡಿ.ಕೆ.ಶಿವಕುಮಾರ್ ನನ್ನ ಜತೆ ಮಾತನಾಡಿದ್ದಾರೆ. ನಾವೆಲ್ಲ ನಿಮ್ಮ ಜತೆ ಇದ್ದೇವೆ, ಯಾವುದಕ್ಕೂ ಕುಗ್ಗಬೇಡ ಎಂದು ಹೇಳಿದ್ದಾರೆ ಎಂದರು.

## ಭರತ್ ವಿರುದ್ಧ ಸಿದ್ದರಾಮಯ್ಯ ಗರಂ

### ಭರತ್ ರೆಡ್ಡಿ ಜೊತೆ ಫೋನ್‌ನಲ್ಲಿ ಮಾತನಾಡಲು ನಿರಾಕರಣೆ

**ಬೆಂಗಳೂರು:** ಜನಾರ್ದನ ರೆಡ್ಡಿ ಮನೆಯ ಮುಂದೆ ನಡೆದ ಘರ್ಷಣೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ನಡವಳಿಕೆಗೆ ಗರಂ ಆಗಿದ್ದಾರೆ.

ಇಂತಹ ಸಣ್ಣ ವಿಚಾರಕ್ಕೆ ಗಲಾಟೆ ಬೇಕಿರಲಿಲ್ಲ. ಈಗ ಕಾರ್ಯಕರ್ತನ ಸಾವಾಗಿದೆ. ಜನಾರ್ದನ ರೆಡ್ಡಿ ಮನೆ ಮುಂದೆ ಹೋಗಿ ಬ್ಯಾನರ್ ಕಟ್ಟುವುದು ಸರಿಯಾದ ನಿರ್ಧಾರವಲ್ಲ ಎಂದು ಕಿಡಿಕಾರಿದ್ದಾರೆ.

ಬಳ್ಳಾರಿ ಗಲಾಟೆಗೆ ಸಂಬಂಧಿಸಿದಂತೆ ಸಿಎಂ ನಿವಾಸದಲ್ಲಿ ಮಾತುಕತೆ ನಡೆಯಿತು. ಈ ವೇಳೆ ಜಮೀರ್ ಅಹಮದ್ ಅವರು ಭರತ್ ರೆಡ್ಡಿ ಜೊತೆ ಫೋನಿನಲ್ಲಿ ಮಾತನಾಡಿದರು. ಬಳಿಕ ಜಮೀರ್ ಸಿಎಂ ಕೈಗೆ ಫೋನ್ ಕೊಟ್ಟು ಭರತ್ ರೆಡ್ಡಿ ಜೊತೆ ಮಾತನಾಡುವಂತೆ ಮನವಿ ಮಾಡಿದರು. ಆದರೆ ಸಿಎಂ ಭರತ್ ರೆಡ್ಡಿ ಜೊತೆ ಫೋನಿನಲ್ಲಿ ಮಾತನಾಡಲು ನಿರಾಕರಿಸಿದರು ಎಂದು ಮಾಹಿತಿ ತಿಳಿಸಿವೆ.

ನಾನು ಭರತ್ ರೆಡ್ಡಿ ಜೊತೆ ಮಾತಾಡಲ್ಲ ಎಂದು ಫೋನ್ ತೆಗೆದುಕೊಳ್ಳದ ಸಿದ್ದರಾಮಯ್ಯ ಅವರು, ಕಂಪ್ಲಿ ಗಣೇಶ್, ನಾಗೇಂದ್ರ ಜೊತೆ ಮಾತನಾಡಿ

ಪುಟ 2ಕ್ಕೆ



**ತನಿಖೆ ನಂತರ ಬುಲೆಟ್ ಬಗ್ಗೆ ತಿಳಿಯಲಿದೆ: ಸಿಎಂ**

**ಬೆಂಗಳೂರು:** ಬಳ್ಳಾರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಕೊಲೆ, ಗಲಾಟೆ ಸಂಬಂಧ ತನಿಖೆಗೆ ಸೂಚನೆ ನೀಡಿದ್ದೇನೆ ಎಂದು ಮುಖ್ಯಮಂತ್ರಿ

ಪುಟ 2ಕ್ಕೆ


## ಇವಿಎಂ ಸುರಕ್ಷಿತ: ಸಮೀಕ್ಷೆ ಅಭಿಮತ

### ಬಿಜೆಪಿ-ಕಾಂಗ್ರೆಸ್ ಪರಸ್ಪರ ಆರೋಪ-ಪ್ರತ್ಯಾರೋಪ

**ಬೆಂಗಳೂರು:** ಕರ್ನಾಟಕದಲ್ಲಿ ಚುನಾವಣಾ ಆಯೋಗ ನಡೆಸಿರುವ ಸಮೀಕ್ಷೆಯಲ್ಲಿ ಜನರು ವಿದ್ಯುನ್ಮಾನ ಮಂತ್ರಗಳ (ಇವಿಎಂ) ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಹಾಗೂ ಬಿಜೆಪಿ ನಡುವಣ ವಾಕ್ ಸಮರಕ್ಕೆ ಇದು ಕಾರಣವಾಗಿದೆ.

ಈ ಸಮೀಕ್ಷೆಯಲ್ಲಿ ಪಾಲ್ಗೊಂಡ ಜನರು, ಇವಿಎಂಗಳಲ್ಲಿ ಮತ ಕಳ್ಳತನ ಆಗಿರುವುದನ್ನು ನಿರಾಕರಿಸಿದ್ದಾರೆ. ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದಿಂದ ನಾಗರಿಕರ ಜ್ಞಾನ, ವರ್ತನೆ ಮತ್ತು ಅಭ್ಯಾಸದ ಅಂತಿಮ ಸಮೀಕ್ಷೆಯನ್ನು ನಡೆಸಲಾಗಿದೆ. ಇದರಲ್ಲಿ 5,100 ಮತದಾರರು ಪಾಲ್ಗೊಂಡಿದ್ದಾರೆ.

ಸಮೀಕ್ಷೆಯಲ್ಲಿ ಜನರು ಇವಿಎಂ ಬಗ್ಗೆ ನಂಬಿಕೆ ವ್ಯಕ್ತಪಡಿಸಿದ್ದಾರೆ. ಶೇ.85ರಷ್ಟು ಮಂದಿ ವಿದ್ಯುನ್ಮಾನ ಮತ ಯಂತ್ರಗಳ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. 2024ರ ಲೋಕಸಭಾ ಚುನಾವಣೆಯು 'ಮುಕ್ತ ಮತ್ತು ನ್ಯಾಯಯುತ'ವಾಗಿ ನಡೆದಿದೆ ಎಂದು ಹೇಳಿದ್ದಾರೆ. ಈ ಮೂಲಕ ರಾಹುಲ್ ಗಾಂಧಿ ಅವರ 'ಮತ ಚೋರಿ' ಆರೋಪ ಸುಳ್ಳು ಎಂದು ಸಮೀಕ್ಷೆ ತಿಳಿಸಿದೆ.



ಈ ಸಮೀಕ್ಷೆ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ.ವಿಜಯೇಂದ್ರ, ಕಾಂಗ್ರೆಸ್ 'ವೋಟ್ ಚೋರಿ' ನಿಲುವು ಮತ್ತೊಮ್ಮೆ ಬಟ್ಟಬಯಲಾಗಿದೆ. ಕರ್ನಾಟಕ ಸರ್ಕಾರವೇ ಪ್ರಕಟಿಸಿದ ಸಮೀಕ್ಷೆ ವರದಿಯಲ್ಲಿ ನಮ್ಮ ಬಹುಪಾಲು ಜನರು ದೇಶದಲ್ಲಿ ಚುನಾವಣೆಗಳು ಮುಕ್ತ ಮತ್ತು ನ್ಯಾಯಯುತವಾಗಿ ನಡೆಯುತ್ತಿವೆ

ಪುಟ 2ಕ್ಕೆ

## ಜನಾರ್ದನ ರೆಡ್ಡಿ ಗುರಿ ಮಾಡಿ ಫೈರಿಂಗ್

### ಮನೆ ಮೇಲೆ ಪೆಟ್ರೋಲ್ ಬಾಂಬ್ ಎಸೆಯಲು ಭರತ್ ಪ್ಲಾನ್: ಶ್ರೀರಾಮುಲು ಆರೋಪ

**ಬಳ್ಳಾರಿ:** ಬಳ್ಳಾರಿಯಲ್ಲಿ ಜನಾರ್ದನ್ ರೆಡ್ಡಿ ಅವರನ್ನು ಗುರಿಯಾಗಿಸಿ ಗುಂಡಿನ ದಾಳಿ ನಡೆದಿದೆ ಎಂದು ಮಾಜಿ ಸಚಿವ ಶ್ರೀರಾಮುಲು ಮತ್ತು ಜನಾರ್ದನ ರೆಡ್ಡಿ ಗಂಭೀರ ಆರೋಪ ಮಾಡಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀರಾಮುಲು, ಜನಾರ್ದನ್ ರೆಡ್ಡಿ ಅವರನ್ನು ಗುರಿಯಾಗಿಸಿ ಗುಂಡಿನ ದಾಳಿ ನಡೆದಿದೆ. ಮನೆ ಮೇಲೆ ಪೆಟ್ರೋಲ್ ಬಾಂಬ್ ಎಸೆಯುವ ಪ್ಲಾನ್ ಕೂಡ ನಡೆದಿದೆ. ಇದು ಆಕಸ್ಮಿಕವಾಗಿ ನಡೆದ ಘಟನೆ ಅಲ್ಲ. ಪ್ರೀ ಪ್ಲಾನ್ಡ್ ಅಟ್ಯಾಕ್ ಆಗಿದೆ. ಕಾಂಗ್ರೆಸ್ ಕಾರ್ಯಕರ್ತರು ಬರೀ ಬ್ಯಾನರ್ ಕಟ್ಟೋಕೆ ಬಂದಿರಲಿಲ್ಲ. ಜನಾರ್ದನ ರೆಡ್ಡಿ ಅವರ ಮನೆಯ ಮೇಲೆ ಪೆಟ್ರೋಲ್ ಬಾಂಬ್ ಎಸೆದು, ಇಡೀ ಮನೆಯನ್ನೇ ಸುಟ್ಟು ಹಾಕುವ ಪ್ಲಾನ್ ಮಾಡ್ಕೊಂಡು ಬಂದಿದ್ದರು ಎಂದು ಆಪಾದಿಸಿದರು.



ವ್ಯಕ್ತಿಯ ಬಲಿ ಪಡೆದ ಗುಂಡು ಹಾರಿದ್ದು ಗಾಳಿಯಲ್ಲಿ ಅಲ್ಲ, ಅದು ಜನಾರ್ದನ ರೆಡ್ಡಿ ಅವರನ್ನೇ ಗುರಿ ಮಾಡಿ ಹಾರಿಸಲಾಗಿದೆ. ಆದರೆ, ದುರಾದೃಷ್ಟವಶಾತ್ ಒಬ್ಬ ಅಮಾಯಕ ಪ್ರಾಣ ಬಿಟ್ಟ ಎಂದು ಹೇಳಿದ್ದಾರೆ.

**ನನ್ನ ಹತ್ಯೆಗೆ ಸಂಚು: ಜನಾರ್ದನರೆಡ್ಡಿ**

**ಬಳ್ಳಾರಿ:** ನಗರ ಶಾಸಕ ನಾರಾ ಭರತ್ ರೆಡ್ಡಿ ಹಾಗೂ ಆಪ್ತ ಸತೀಶ್ ರೆಡ್ಡಿ ಹಾಗೂ ಭರತ್ ರೆಡ್ಡಿ ತಂದೆ ನಾರಾ ಸೂರ್ಯನಾರಾಣರೆಡ್ಡಿಯಿಂದ ನನ್ನ ಹತ್ಯೆಗೆ ಸಂಚು ನಡೆದಿದೆ ಎಂದು ಶಾಸಕ ಜನಾರ್ದನರೆಡ್ಡಿ ಆರೋಪಿಸಿದರು.

ಬ್ಯಾನರ್ ಗಲಾಟೆ ನೆಪದಲ್ಲಿ ನಮ್ಮ ನಿವಾಸದ ಮುಂದೆ ಗನ್ ಮ್ಯಾನ್‌ಗಳಿಂದ ಗುಂಡಿನ ದಾಳಿಯಾಗಿದೆ. ನಾನು ಗಂಗಾವತಿಯಿಂದ ಕಾರಿನಲ್ಲಿ ಬಂದು ಇಳಿಯುತ್ತಿದ್ದಂತೆ ಗುಂಡಿನ ದಾಳಿ ಆರಂಭಿಸಿದ್ದಾರೆ. ಗನ್ ಮ್ಯಾನ್‌ಗಳು ನಾಲ್ಕಾರು ರೌಂಡ್ ಫೈರ್ ಮಾಡಿದ್ದಾರೆ. ಊರಿಗೆ ಬೆಂಕಿ ಹಚ್ಚಲು ಹೊರಟಿದ್ದಾರೆ. ಕೊಲೆಗೆಡುಕರನ್ನ ಹಿಂದಿಟ್ಟುಕೊಂಡು ದಬ್ಬಾಳಿಕೆ ನಡೆಸುತ್ತಿದ್ದಾರೆಂದು ಕಿಡಿಕಾರಿದರು.

ಜನಾರ್ದನ ರೆಡ್ಡಿ ಬರುವಾಗ ಏಕಾಏಕೀ

ಪುಟ 2ಕ್ಕೆ

# ಸಹಕಾರದಿಂದ ಸಹಕಾರಿ ಕ್ಷೇತ್ರ ಪ್ರಗತಿ

**ಅರಸೀಕೆರೆ:** ಒಬ್ಬರಿಗೊಬ್ಬರ ಸಹಕಾರದಿಂದ ಸಹಕಾರಿ ಕ್ಷೇತ್ರವು ಉನ್ನತ ಮಟ್ಟದಲ್ಲಿ ಪ್ರಗತಿ ಹೊಂದಲು ಸಾಧ್ಯವಾಗುತ್ತದೆ ಎಂದು ನಿರಂಜನ ಪೀಠ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಶ್ರೀ ರುದ್ರಮುನಿ ಸ್ವಾಮೀಜಿ ತಿಳಿಸಿದರು.

ಕಣಕಟ್ಟೆ ಹೊ. ಮಾಡಾಳು ಗ್ರಾಮದ ನಿರಂಜನ ಪೀಠದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ರುದ್ರಮುನಿ ಸ್ವಾಮೀಜಿಯವರು ಒಬ್ಬರಿಗೊಬ್ಬರ ಸಹಕಾರದಿಂದ ಸಹಕಾರಿ ಕ್ಷೇತ್ರವು ಉನ್ನತ ಮಟ್ಟದಲ್ಲಿ ಪ್ರಗತಿ ಹೊಂದಲು ಸಾಧ್ಯವಾಗುತ್ತದೆ.. ಎಂದು ನಿರಂಜನ ಪೀಠ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಶ್ರೀ ರುದ್ರಮುನಿ ಸ್ವಾಮೀಜಿ ಅಭಿಮತ ವ್ಯಕ್ತಪಡಿಸಿದರು.

.ಗ್ರಾಮೀಣ ಭಾಗದಲ್ಲಿ ಇಂತಹ ಸಹಕಾರ ಸಂಘಗಳನ್ನು ಸ್ಥಾಪಿಸಿ ಆರ್ಥಿಕ ಹಿನ್ನಡೆಯಲ್ಲಿರುವ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಿ ಸ್ವಾವಲಂಬಿಗಳನ್ನಾಗಿ ಮಾಡಿದಾಗ ಮಾತ್ರಅವರ ಬದುಕು ಹಸನಾಗುತ್ತದೆ ಎಂದರು ಸೌಹಾರ್ದ ವಿವಿಧೋದ್ದೇಶ ಸಹಕಾರ ಸಂಘಗಳ ಆಡಳಿತ ಮಂಡಳಿ ಮೈಸೂರು ಸಲಹೆಗಾರರಾದ ಶೇಖರ್ ಕೌಂಡಿನ್ಯ ಸಹಕಾರ ಸಂಘಗಳ



ಕಾರ್ಯವೈಖರಿಯ ಬಗ್ಗೆ ಮಾತನಾಡಿದರು ಸಹಕರಿ ಸಂಘದ ಉಪಾಧ್ಯಕ್ಷ ಎನ ಜಿ ಮರುಳ ಸಿದ್ದ ಸ್ವಾಮಿ ನಾಗಸಮುದ್ರ ವಾಸ್ತವಿಕವಾಗಿ ಮಾತನಾಡಿದರು ಆರಂಭದಲ್ಲಿ ಕಾರ್ಯನಿರ್ವಹಣಾಧಿ ಕಾರಿ ಆರ್ ಬಿ ಸುಷ್ಮಾ 24 25 ನೇ ಸಾಲಿನ ವರದಿ ಓದಿದರು ಅರಸೀಕೆರೆ ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ಹಾಗೂ ಸಂಘದ ನಿರ್ದೇಶಕ ಎಸ್ ಎಂ ಗಂಗಾಧರ್ ನಿರ್ದೇಶಕರಾದ ಚಂದ್ರಪ್ಪ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ರಾಂಪುರಶೇಖರಪ್ಪ, ಜಿ ಪಂ ಮಾಜಿ ಸದಸ್ಯ ಎಂ ಎಸ್ ವಿ ಸ್ವಾಮಿ, ಗ್ರಾಪಂ ಸದಸ್ಯಕೊಡ್ಲಿ ಬಸವರಾಜ್, ಮುಂತಾದವರು ಉಪಸ್ಥಿತರಿದ್ದರು.

# ರಾಜರ ದೂರದೃಷ್ಟಿ ಅನುಸರಿಸಲಿ

ಮೈಸೂರು: ರಾಜರ ದೂರದೃಷ್ಟಿಯನ್ನು ಇಂದಿನ ತಲೆಮಾರು ಅನುಸರಿಸುವ ಕೆಲಸ ಆಗಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹೇಳಿದರು.

ನಗರದ ಮಾನಸಗಂಗೋತ್ರಿಯ ಪ್ರೊ.ಕೆ.ಎಸ್. ರಂಗಪ್ಪ ಸಭಾಂಗಣದಲ್ಲಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗದಿಂದ ಶುಕ್ರವಾರ ನಡೆದ ಅರ್ಬನ್ ವಲ್ನೆರೆಬಿಲಿಟಿ ಅಸೆಸ್‌ಮೆಂಟ್ ಅಂಡ್ ಕ್ಲೈಮೆಂಟ್ ಚೇಂಜ್ ಕುರಿತು ಕಾರ್ಯಾಗಾರವನ್ನು ಉದ್ಘಾಟಿಸಿ ವಾತನಾಡಿದರು. ನಗರದಲ್ಲಿ ಅನೇಕ ಸಮಸ್ಯೆಗಳಿಗೆ ಕಡಿವಾಣ ಹಾಕಬಹುದು. ಬೆಳವಣಿಗೆ ಎಂದರೆ ಸುಂದರ ಕಟ್ಟಡಗಳನ್ನು ಕಟ್ಟುವುದಿಲ್ಲ, ಜೊತೆಯಲ್ಲಿ ಪರಿಸರವನ್ನು ಉಳಿಸುವುದು ಕೂಡ ಆಗಿದೆ ಎಂದರು.

ಕಸವನ್ನು ಇನ್ನೊಬ್ಬರ ಕಾಂಪೌಡ್‌ಗೆ ಬಿಸಾಡುವ ಮನಸ್ಥಿತಿಯಿಂದ ದೂರ ಸರಿದು, ನಗರವನ್ನು ಸುಂದರ ಹಾಗೂ ಸ್ವಚ್ಛವಾಗಿ ಇಡಬೇಕು. ಪ್ರತಿಯೊಬ್ಬರಿಗೂ ನಗರಾಭಿವೃದ್ಧಿಯ ಬೆಳವಣಿಗೆಯನ್ನು ತಮ್ಮ ಕರ್ತವ್ಯ ಎಂದು ಭಾವಿಸಿ ಕೆಲಸ ಮಾಡಬೇಕು. ನಗರದ ಸಮಸ್ಯೆಗಳು ಅಧಿಕಾರಿಗಳಿಂದ ಬಗೆಹರಿಯವುದು ಎಂದು ಕುಳಿತುಕೊಳ್ಳ



ಬಾರದು, ಯೋಜನೆಗಳ ಮೂಲಕ ನಗರ ಅಭಿವೃದ್ಧಿಗೆ ನಾವು ಕೂಡ ಕೈಜೋಡಿಸಬೇಕಿದೆ ಎಂದರು.

ಆಂಡ್ ಪ್ರಾವಿಡೆಂಟ್ ಹೌಸಿಂಗ್ ಲಿಮಿಟೆಡ್ ಮುಖ್ಯಸ್ಥ ಡಾ.ಎಸ್.ಗೋಪಿಪ್ರಸಾದ್ ಮಾತನಾಡಿದರು. ಸ್ಕೂಲ್ ಆಫದ ಪ್ಲಾನಿಂಗ್ ಆಂಡ್ ಆರ್ಕಿಟೆಕ್ಚರ್ ವಿಭಾಗದ ನಿರ್ದೇಶಕ ಪ್ರೊ.ಪ್ರಮೋದ್ ಎಂ.ಗವಾರಿ, ಮುಖ್ಯಸ್ಥ ಪ್ರೊ.ಎಚ್. ಎನ್.ನಾಗೇಂದ್ರ, ಸಂಚಾಲಕ ಡಾ.ಎಚ್.ಎಸ್. ಕುಮಾರ್ ಇನ್ನಿತರರು ಭಾಗವಹಿಸಿದ್ದರು.

# ಸಕಾಲ ಪ್ರಗತಿಯಲ್ಲಿ ಜಿಲ್ಲೆಗೆ ರಾಜ್ಯದಲ್ಲೇ ಮೂರನೇ ಸ್ಥಾನ

ರಾಮನಗರ: ಕಳೆದ ಡಿಸೆಂಬರ್ ಮಾಹೆಯ ಸಕಾಲ ಪ್ರಗತಿಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯು ರಾಜ್ಯದಲ್ಲಿಯೇ ಮೂರನೇ ಸ್ಥಾನ ಪಡೆದಿದೆ. ಜಿಲ್ಲೆಯಲ್ಲಿ ಡಿಸೆಂಬರ್ ಮಾಹೆಯಲ್ಲಿ ಒಟ್ಟು 57,001 ಅರ್ಜಿಗಳನ್ನು ಸಕಾಲ ಯೋಜನೆಯಡಿ ಸ್ವೀಕರಿಸಿದ್ದು ಈ ಪೈಕಿ 53,955 ಅರ್ಜಿಗಳನ್ನು ಸಕಾಲ ನಿಯಮಗಳನ್ವಯ ನಿಗದಿತ ಕಾಲಮಿತಿಯೊಳಗೆ ವಿಲೇವಾರಿ ಮಾಡಲಾಗಿದೆ. 3,021 ಅರ್ಜಿಗಳು ಸೂಕ್ತ ದಾಖಲೆಗಳಿಲ್ಲದ ಕಾರಣ ತಿರಸ್ಕೃತಗೊಂಡಿವೆ. ನಿಗದಿತ ಕಾಲಮಿತಿಯೊಳಗೆ ಅರ್ಜಿಗಳು ವಿಲೇವಾರಿಯಾಗುವುದರಿಂದ ಸಾರ್ವಜನಿಕರು ಸರ್ಕಾರಿ ಕಚೇರಿಗಳಿಗೆ ಪದೇ ಪದೇ ಅಲೆಯುವುದು ತಪ್ಪುತ್ತದೆ. ಜೊತೆಗೆ ಆಡಳಿತವೂ ಪಾರದರ್ಶಕವಾಗಿ ನಡೆಯಲು ಈ ಯೋಜನೆ ಸಹಕಾರಿಯಾಗಿದೆ. ಜಿಲ್ಲೆಯ ಅಧಿಕಾರಿಗಳ ಕಾರ್ಯಕ್ಷಮತೆಯಿಂದ ಈ ಸಾಧನೆಯಾಗಿರುವುದಕ್ಕೆ ಜಿಲ್ಲಾಧಿಕಾರಿಗಳು ಹರ್ಷವ್ಯಕ್ತಪಡಿಸಿದ್ದಾರೆ.

# ರಾಷ್ಟ್ರೀಯ ಚಾಂಪಿಯನ್ ವುಶು ಕ್ರೀಡಾಕೂಟದಲ್ಲಿ ಮೋನಿಷಾಗೆ ಚಿನ್ನ

ಗುಂಡ್ಲುಪೇಟೆ, ಜ.02–ಪಟ್ಟಣದ ಹೊಸೂರಿನ ಬಾಲಕಿ ಮೋನಿಷಾ.ಎಂ ರಾಷ್ಟ್ರೀಯ ಚಾಂಪಿಯನ್ ವುಶು ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಸಬ್ ಜೂನಿಯರ್ ವುಶು ವಿಭಾಗದಲ್ಲಿ ಚಿನ್ನ ಪಡೆಯುವ ಮೂಲಕ ಕರ್ನಾಟಕದಲ್ಲಿ ಮೊದಲಿಗಳಾಗಿ ಹೊರ ಹೊಮ್ಮಿದ್ದಾಳೆ.

ಹೊಸೂರಿನ ಮಧು ಮತ್ತು ನಂದಿನಿ ದಂಪತಿಗಳ ಪುತ್ರಿ ಮೋನಿಷಾ.ಎಂ ಛತ್ತೀಸ್ಗಡದಲ್ಲಿ ನಡೆದ 9ನೇ ವುಶು ಪೇಡರೇಷನ್ ಕಪ್ ರಾಷ್ಟ್ರೀಯ ಚಾಂಪಿಯನ್ ಶಿಪ್ ನಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಕರ್ನಾಟಕಕ್ಕೆ ಕೀರ್ತಿ ತಂದಿದ್ದಾರೆ. ಈ ಅಸಾಧಾರಣ ಗೆಲುವು ರಾಷ್ಟ್ರೀಯ ವೇದಿಕೆಯಲ್ಲಿ ಕರ್ನಾಟಕ ವುಶುವಿನ ಪ್ರಯಾಣದಲ್ಲಿ ಹೆಮ್ಮೆಯ, ನಿರ್ಣಾಯಕ ಮತ್ತು ಮರೆಯಲಾಗದ ಮೈಲಿಗಲ್ಲನ್ನು ಸೂಚಿಸುತ್ತದೆ. ಮೊದಲ ಪಂದ್ಯ ಹರಿಯಾಣವನ್ನು 2–1 ಅಂತರದಿಂದ ಸೋಲಿಸಿದ್ದು, ಎರಡನೇ ಪಂದ್ಯ ಒಡಿಶಾವನ್ನು 2–1 ಅಂತರ ಮತ್ತು ಅಂತಿಮ ಪಂದ್ಯ ರಾಜಸ್ಥಾನವನ್ನು 2–0 ಅಂತರದಿಂದ ಮೋನಿಷಾ.ಎಂ ಸೋಲಿಸಿದ್ದಾರೆ. ತನ್ನ ಎಲ್ಲಾ ಪಂದ್ಯಗಳಲ್ಲಿ ಮೋನಿಷಾ ಅಸಾಧಾರಣ ಕೌಶಲ್ಯ, ನಿರ್ಭೀತ ಆಕ್ರಮಣಶೀಲತೆ, ಯುದ್ಧತಂತ್ರದ ಬುದ್ಧಿವಂತಿಕೆ ಮತ್ತು ಸಿಂಹದ ಹೃದಯದಿಂದ ಹೋರಾಡಿ ಗೆಲುವು ಪಡೆದಿದ್ದಾರೆ. ಧರ್ಮ, ದರ್ಶನ್ ಹಾಗೂ ಪೃಥ್ವಿ ಅವರುಗಳ ಮಾರ್ಗದರ್ಶನದಲ್ಲಿ ತರಬೇತಿ ಪಡೆದ ಮೋನಿಷಾ.ಎಂ ಜಯಶಾಲಿಯಾಗಿದ್ದು, ಮೈಸೂರಿನ ಸೆಂಟ್ ಥಾಮಸ್ ಸೆಂಟ್ರಲ್ ಸ್ಕೂಲ್ ನಲ್ಲಿ 6ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.



# ಜಿಲ್ಲಾ ಮಟ್ಟದ ಉದ್ಯೋಗ ಮೇಳ ಆಯೋಜಿಸಿ

## ಅಗತ್ಯ ಸಿದ್ದತೆಗೆ ಜಿ.ಪಂ. ಸಿಇಓ ಸೂಚನೆ । ಪೂರ್ವಭಾವಿ ಸಭೆ

ರಾಮನಗರ: ನಿರುದ್ಯೋಗಿಗಳಿಗೆ ಸೂಕ್ತ ಉದ್ಯೋಗಗಳನ್ನು ಒದಗಿಸಲು ಇಲ್ಲಿನ ಜಿಲ್ಲಾ ಪಂಚಾಯತ್ ಹಾಗೂ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯಡಿ 2025–26ನೇ ಸಾಲಿನಲ್ಲಿ ಜಿಲ್ಲಾ ಮಟ್ಟದಲ್ಲಿ ಉದ್ಯೋಗ ಮೇಳ ಆಯೋಜಿಸಲಿದೆ, ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಅಗತ್ಯ ಸಿದ್ದತೆಗಳನ್ನು ಮಾಡಿಕೊಳ್ಳುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನ್ಮೋಲ್ ಜೈನ್ ಅವರು ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಧಾನ ಮಂತ್ರಿಗಳ ಮಹತ್ವಾಕಾಂಕ್ಷೆಯ ದೀನದಯಾಳ್ ಉಪದ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಲ್ಲಿ ಗ್ರಾಮೀಣ ಪ್ರದೇಶದ ಬಡ ಯುವಜನರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ ಉದ್ಯೋಗ ಕಲ್ಪಿಸಲು ಸರ್ಕಾರದ/ಸರ್ಕಾರೇತರ ಸಂಘ ಸಂಸ್ಥೆಗಳ ಮೂಲಕ ಮತ್ತು ವಿವಿಧ ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂದು ಹೇಳಿದರು.

ಜಿಲ್ಲೆಯ ಯುವಜನತೆಯ ದತ್ತಾಂಶಗಳನ್ನು ಸಂಗ್ರಹಿಸಿ ಅವರ ಸಾಮರ್ಥ್ಯಗಳನ್ನು ಪ್ರಸ್ತುತ ಲಭ್ಯವಿರುವ ಉದ್ಯೋಗಾವಕಾಶಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಉದ್ಯೋಗ ಕಲ್ಪಿಸುವುದು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರು, ವಿಕಲಚೇತನರು, ಲೈಂಗಿಕ ಅಲ್ಪಸಂಖ್ಯಾತರು, ವಿಶೇಷ ವರ್ಗದ ಜನತೆಗೆ ಉದ್ಯೋಗಗಳನ್ನು ಒದಗಿಸುವುದು ಈ ಉದ್ಯೋಗ ಮೇಳದ ಉದ್ದೇಶ ಎಂದರು.

ಉದ್ಯೋಗ ಮೇಳದ ಕುರಿತು ಕರಪತ್ರಗಳನ್ನು ಹಂಚುವುದು, ಧ್ವನಿವರ್ಧಕ ಬಳಕೆ ಹಾಗೂ ಗೋಡೆ ಬರಹ ಸೇರಿದಂತೆ ವಿವಿಧ ಮಾದ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡುವಂತೆ ಮುಖ್ಯವಾಗಿ ಸಾಮಾಜಿಕ ಜಾಲ ತಾಣಗಳ ಮೂಲಕ ಪ್ರಚಾರ ಕೈಗೊಳ್ಳಬೇಕು ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಶಿವಕುಮಾರ್ ಸೇರಿದಂತೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.




# ಜ.8ರಂದು ಚನ್ನಪಟ್ಟಣದಲ್ಲಿ “ಎಂದೂ ಮರೆಯದ ಹಾಡುಗಳ ಸಂಗೀತ ಸಂಜೆ”

ಚನ್ನಪಟ್ಟಣ: ಕಳೆದ ಮೂರು ದಶಕಗಳಿಂದ ವಾದ್ಯಗೋಷ್ಠಿ ಗಾಯಕರಾಗಿ, ಸಾಂಸ್ಕೃತಿಕ ಸಂಘಟಕರಾಗಿ ವೈವಿದ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಕಲಾ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಗಾಯಕ ಡಾ.ರಾ.ಬಿ.ನಾಗರಾಜ್, ತಮ್ಮ ಸಂಗೀತ ಸೌರಭ ವಾದ್ಯಗೋಷ್ಠಿ ವತಿಯಿಂದ “ಎಂದೂ ಮರೆಯದ ಹಾಡುಗಳ ಸಂಗೀತ ಸಂಜೆ” ಹಾಗೂ ಕಲಾ ಪೋಷಕರಿಗೆ ಗೌರವಾರ್ಪಣೆ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.

ಜನವರಿ 8 ನೇ ತಾರೀಖು ಗುರುವಾರ ಸಂಜೆ 4 ಗಂಟೆಗೆ ಚನ್ನಪಟ್ಟಣದ ಶತಮಾನೋತ್ಸವ ಭವನದಲ್ಲಿ ಆಯೋಜಿಸಿರುವ ಈ ಕಾರ್ಯಕ್ರಮದ ಸಾನಿಧ್ಯವನ್ನು, ಗೌಡಗೆರೆ ಶ್ರೀ ಚಾಮುಂಡೇಶ್ವರಿ ಪುಣ್ಯಕ್ಷೇತ್ರದ ಧರ್ಮದರ್ಶಿಗಳಾದ ಡಾ.ಮಲ್ಲೇಶ್ ಗುರೂಜಿ ವಹಿಸಲಿದ್ದು, ಅಖಿಲ ಭಾರತ ಸನಾತನ ಧರ್ಮ ಜಾಗರಣ ಮಂಚ್ ದಕ್ಷಿಣ ಭಾರತ ಮುಖ್ಯಸ್ತರಾದ ಡಾ.ಆರ್. ಎಸ್.ರಾಜು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ತಾಲ್ಲೂಕು ಬಿ.ಜೆ.ಪಿ ಅಧ್ಯಕ್ಷರಾದ ಎಲೆಕೇರಿ ರವೀಶ್, ಒಕ್ಕಲಿಗರ ಸಂಘದ ರಾಜ್ಯ ನಿರ್ದೇಶಕರಾದ ವೆಂಕಟರಾಮೇಗೌಡ, ಶ್ರೀ ನಂದಿ ಕಮ್ಯೂಟರ್ಸ್ ಮಾಲೀಕರಾದ ಬಿ.ದಿನೇಶ್, ಗುರುವಪ್ಪ ಆಸ್ಪತ್ರೆಯ ವೈದ್ಯರಾದ ಡಾ. ಲೋಕಾನಂದ್, ಡಾ.ರಾಜ್ ಕಲಾ ಬಳಗದ ಖಜಾಂಚಿ ಎಂ.ಜಿ.ಮಹೇಶ್ ಕುರ್ಮಾ, ಸರ್ಕಾರಿ ಆಸ್ಪತ್ರೆಯ ಸರ್ಜನ್ ಡಾ.ಟಿ.ಮಹೇಂದ್ರಕುರ್ಮಾ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಬಿ.ಟಿ.ಚಿಕ್ಕಪುಟ್ಟೇಗೌಡ, ರಾಜ್ ಮಕ್ಕಳ ಚಿಕಿತ್ಸಾಲಯದ ಮಕ್ಕಳ ತಜ್ಞೆ ಡಾ.ರಾಜಶ್ರೀ, ನಗರಸಭಾ ಸದಸ್ಯರಾದ ಎಂ.ಜೆ.ರೇವಣ್ಣ, ಸಂಸ ಥಿಯೇಟರ್ ಗೌರವಾದ್ಯಕ್ಷರಾದ ಎಂ.ಜಯರಾಮು, ಹಿರಿಯ ಶಿರಸ್ತೇದಾರ್ ಹನುಮಂತರಾಜು, ಗುರುಶ್ರೀ ಫೌಂಡೇಷನ್ ಟ್ರಸ್ಟ್ ಅಧ್ಯಕ್ಷರಾದ ಪಿ.ಗುರುಮಾದಯ್ಯ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾದ ಪೂರ್ಣಚಂದ್ರ ಕೀರ್ಕ, ಅಭ್ಯುದಯ ಮಹಿಳಾ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ ಅಧ್ಯಕ್ಷರಾದ ಶ್ರೀಮತಿ ಬಿ.ವಿ.ಗೀತಾಂಜಲಿ ಅಭಿಲಾಷ್, ಡಾ.ರಾಜ್ ಕಲಾ ಬಳಗದ ಅಧ್ಯಕ್ಷರಾದ ಹೆಚ್.ಮಂಜುನಾಥ್ ಎಲೆಕೇರಿ, ಹಿರಿಯ ರಂಗಭೂಮಿ ಕಲಾವಿದರಾದ ದಯಾನಂದ್, ಸಾಹಿತಿ ವಿಜಯ್ ರಾಂಪುರ, ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಜಿಲ್ಲಾಧ್ಯಕ್ಷರಾದ ಬಿ.ಸಿ.ಯೋಗೀಶ್ ಗೌಡ, ಅಂತರಾಷ್ಟ್ರೀಯ ಯೋಗಪಟು ಕೆ.ಎಂ.ಶಿವಕುರ್ಮಾ, ರಂಗಭೂಮಿ ಕಲಾವಿದರಾದ ಸುಮತಿಕುರ್ಮಾ ಜೈನ್ ಉಪಸ್ಥಿತರಿರುವರು. ವಾದ್ಯಗೋಷ್ಠಿ ರಂಗದ ಹಿರಿಯ ಕಲಾವಿದರು ಅರ್ಥಪೂರ್ಣ ಸಾಹಿತ್ಯ, ಸಂಗೀತದ ಅಪರೂಪದ ಹಾಡುಗಳಿಗೆ ದನಿಯಾಗಲಿದ್ದು, ಕಲಾಭಿಮಾನಿಗಳು ಆಗಮಿಸಿ ಗಾಯನ ಸುದೆಯನ್ನು ಸವಿಯುವಂತೆ ಡಾ.ರಾ.ಬಿ.ನಾಗರಾಜ್ ಮನವಿ ಮಾಡಿದ್ದಾರೆ.

# ಕಂದಾಯ ಇಲಾಖೆ ನೌಕರರು ಒಗ್ಗಟ್ಟಿನಿಂದ ಕೆಲಸ ಮಾಡಿ




**ಮಂಡ್ಯ:** ಕಂದಾಯ ಇಲಾಖೆಯ ನೌಕರರು ಒಕ್ಕೊರಕು ಮತ್ತು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಉತ್ತಮ ಸಾಧನೆ ಮಾಡಬಹುದು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಕಂದಾಯ ಇಲಾಖೆ ನೌಕರರ ಸಂಘದವರು ಏರ್ಪಡಿಸಿದ್ದ 2026ರ ನೂತನ ಹೊಸ ವರ್ಷದ ಶುಭಾಶಯ ಸಲ್ಲಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಂದಾಯ ಇಲಾಖೆಯಲ್ಲಿ ಹೊಣೆಗಾರಿಕೆ ಹೆಚ್ಚು ಇರುತ್ತದೆ. ಜನಸಾಮಾನ್ಯರನ್ನು ಮುಟ್ಟುವ ಏಕೈಕ ಇಲಾಖೆಯಾಗಿದ್ದು, ಇಂತಹ ಇಲಾಖೆಯಲ್ಲಿ ಕೆಲಸ ಮಾಡಲು ಸಿಕ್ಕಿರುವ ಅವಕಾಶ ಪುಣ್ಯ ಎಂದರು. ಹೊಸ ವರ್ಷದಲ್ಲಿ ಹೊಸ ದಿನಗಳು ಬರುತ್ತವೆ. ನಾವುಗಳು ಕೂಡ ಅದಕ್ಕೆ ಸರಿಯಾಗಿ ಹೊಂದಿಕೊಂಡು ಹೋಗಬೇಕು. ಸಮಯ ಯಾರನ್ನೂ ಕಾಯುವುದಿಲ್ಲ. ಬದುಕು ಹಾಗೂ ಸಮಯ ನಿಂತ ನೀರಾಗಲು ಸಾಧ್ಯವಿಲ್ಲ. ಸದಾ ಹರಿಯುವ ನೀರಾಗಿದ್ದರೆ ಮಾತ್ರ ಪರಿಶುದ್ಧವಾಗಿರುತ್ತದೆ ಎಂದು ತಿಳಿಸಿದರು.

ಪ್ರತಿಯೊಂದರಲ್ಲೂ ಕೂಡ ಜೀವನೋತ್ಸಹ ಇಲ್ಲ ಎಂದರೆ ಹೊಸತನ ಹಾಗೂ ಬದುಕಿನಲ್ಲಿ ಒಳ್ಳೆಯ ಕೆಲಸ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು. ಕಂದಾಯ ಇಲಾಖೆ ನೌಕರರ ಸಂಘದ ವತಿಯಿಂದ ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಉಪ ವಿಭಾಗಾಧಿಕಾರಿ ಶಿವಮೂರ್ತಿ ಹಾಗೂ ತಹಸಿಲ್ದಾರ್ ಅವರಿಗೂ ಹೊಸ ವರ್ಷದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಂದಾಯ ಇಲಾಖೆಯ ನೌಕರರ ಸಂಘದ ಅಧ್ಯಕ್ಷ ಡಿ.ತಮ್ಮಣ್ಣಗೌಡ, ಪ್ರಧಾನ ಕಾರ್ಯದರ್ಶಿ ಭಾಸ್ಕರ್, ರಾಜ್ಯ ಪರಿಷತ್ ಸದಸ್ಯರಾದ ಮಂಜುನಾಥ್, ಜಯಕುಮಾರ್, ತಾಲ್ಲೂಕು ಕಂದಾಯ ಇಲಾಖೆಯ ಚಂದ್ರಕಲಾ, ವೆಂಕಟೇಶ್, ಲಿಂಗಸ್ವಾಮಿ ಇತರರಿದ್ದರು.

# ರಾಷ್ಟ್ರೀಯ ಕೈಮಗ ಮೇಳ ಉದ್ಘಾಟನೆ





ಬೆಂಗಳೂರು: ನಗರದ ಮಹಾಲಕ್ಷ್ಮಿಪುರಂ ಲೇಔಟ್ ನ ರಾಣಿ ಅಬ್ಬಕ್ಕ ಆಟದ ಮೈದಾನದಲ್ಲಿ ಜವಳಿ ಮಂತ್ರಾಲಯ, ನವದೆಹಲಿ, ಕೇಂದ್ರ ಸರ್ಕಾರ ಮತ್ತು ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ, ನೇಕಾರರ ಮಹಾ ಮಂಡಳ ನಿ (ಕಾವೇರಿ ಹ್ಯಾಂಡ್ ಲೂಮ್ಸ್), ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಕೈಮಗ ಮೇಳ–2026 (ಗಾಂಧಿ ಬುನಕರ್ ಮೇಳ) ವನ್ನು ಕೈಮಗ, ಮತ್ತು ಜವಳಿ, ಸಕ್ಕರೆ, ಕಬ್ಬು ಅಭಿವೃದ್ಧಿ ಹಾಗೂ ಕೃಷಿ ಮಾರುಕಟ್ಟೆಯ ಸಚಿವರಾದ ಶಿವಾನಂದ ಎಸ್. ಪಾಟೀಲ ಅವರು ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಮಹಾಲಕ್ಷ್ಮೀಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ. ಗೋಪಾಲಯ್ಯ, ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳ ನಿ., (ಕಾವೇರಿ ಹ್ಯಾಂಡ್ ಲೂಮ್ಸ್), ಅಧ್ಯಕ್ಷರಾದ ಬಿ.ಜೆ.ಗಣೇಶ್ , ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ (ಎಂ.ಎಸ್.ಎಂ.ಇ. ಗಣಿ ಸಕ್ಕರೆ ಮತ್ತು ಜವಳಿ) ಸರ್ಕಾರದ ಕಾರ್ಯದರ್ಶಿಗಳಾದ ರೋಹಿಣಿ ಸಿಂಧೂರಿ, ಕೈಮಗ್ಗ ಮತ್ತು ಜವಳಿ ಇಲಾಖೆಯ ನಿರ್ದೇಶಕರು ಹಾಗೂ ಜವಳಿ ಅಭಿವೃದ್ಧಿ ಆಯುಕ್ತರಾದ ಕೆ.ಜ್ಯೋತಿ, ಬೆಂಗಳೂರು ನೇಕಾರರ ಸೇವಾ ಕೇಂದ್ರದ ಉಪ ನಿರ್ದೇಶಕರಾದ ಡಾ. ಪ್ರಭಾ ಕರಣ್ ಮತ್ತು ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳ ನಿ., (ಕಾವೇರಿ ಹ್ಯಾಂಡ್ ಲೂಮ್ಸ್) ವ್ಯವಸ್ಥಾಪಕ ನಿರ್ದೇಶಕಾರದ ಸೌಮ್ಯ . ಉಪಸ್ಥಿತರಿದ್ದರು.

# ಭೀಮಾ ಕೋರೆಂಗಾವ್ ವಿಜಯೋತ್ಸವ



ಗುಂಡ್ಲುಪೇಟೆ. ಪಟ್ಟಣದ ತಾಲೂಕು ಕಚೇರಿ ಮುಂಭಾಗದಲ್ಲಿ ಪ್ರೋ. ಬಿ (ಕೃಷ್ಣಪ್ಪ )ಬಣದ ದಲಿತ ಸಂಘರ್ಷ ಸಮಿತಿ ವತಿಯಿಂದ 208 ನೇ ಭೀಮಾ ಕೋರೆಂಗಾವ್ ವಿಜಯೋತ್ಸವವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ಇದೆ ವೇಳೆ ತಾ. ಅಧ್ಯಕ್ಷ ನಾಗಮಲ್ಲು ಮಾತನಾಡಿ ಸಮಾನತೆ ಮತ್ತು ಸ್ವಾಭಿಮಾಕ್ಕೋಸ್ಕರ ನಡೆದ ಮೊದಲ ಏಕೈಕ ಮಹಾನ್ ಯುದ್ಧ ಭೀಮ್ ಕೋರೆಂಗಾವ್ ಯುದ್ಧ ಎಂದರು

ಬಾಬಾ ಸಾಹೇಬ್ ಅಂಬೇಡ್ಕರ್ ರವರಿಗೆ ಬಾಲ್ಯದಲ್ಲಿ ಶಿಕ್ಷಣ ದೊರೆಯಲು ಒಂದು ಪ್ರೇರಣೆ, ಉನ್ನತ ಶಿಕ್ಷಣ ಪಡೆಯಲು ಕಾರಣವಾಯಿತು. ಮತ್ತು ಇಂಗ್ಲೆಂಡ್ ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಗ್ರಂಥಾಲಯದ ಒಂದು ಪುಸ್ತಕದಲ್ಲಿ 1818ರ ಕೋರೆಗಾಂವ್ ಯುದ್ಧದ ಕುರುವು ಸಿಕ್ಕತು. ಅದರ ಇತಿಹಾಸವನ್ನು ಸಂಶೋಧಿಸಿದ ಅಂಬೇಡ್ಕರ್ ಕುರುಹುಗಳ ಮೂಲಕ ಇದನ್ನು ದಾಖಲಿಸಿ, ಆಚರಿಸಿದರು. ಅಂದಿನಿಂದ ಇಂದಿನವರೆಗೂ ಭೀಮಾ ಕೋರೆಗಾಂವ್ ಅವಿಸ್ಮರಣೀಯವಾಗಿದೆ” ಎಂದು ತಿಳಿಸಿದರು

ಈ ಸಂದರ್ಭದಲ್ಲಿ ಕಾನೂನು ಸಲಹೆಗಾರ ಸಿದ್ದಯ್ಯ. ವಕೀಲರಾದ ಸಿದ್ದೇಶ್. ರಾಜೇಂದ್ರ. ಮದ್ದೂರು ನಾರಾಯಣ ಸ್ವಾಮಿ. ಶಿವಣ್ಣ ಬೊಮ್ಮನಹಳ್ಳಿ. ಕೃಷ್ಣಪ್ಪ. ರಂಗಸ್ವಾಮಿ. ಬಂಗಾರ ಸ್ವಾಮಿ. ವಂಕಟೇಶ್ ಸಿದ್ದಯ್ಯ. ಕೇಬ್ಬೆಪುರ. ಶಿವು ವಂಕಟರಾಜು ಇತರರು ಇದ್ದರು

# ಕ್ರಷರ್ ಯಂತ್ರಕ್ಕೆ ಸಿಲುಕಿ ಕಾರ್ಮಿಕ ಸಾವು

ಗುಂಡ್ಲುಪೇಟೆ: ಕಾರ್ಮಿಕನೋರ್ವ ಕ್ರಷರ್ ಯಂತ್ರಕ್ಕೆ ಸಿಲುಕಿ ಮೃತಪಟ್ಟಿರುವ ಘಟನೆ ತಾಲೂಕಿನ ಮಡಹಳ್ಳಿ ಹೂರಲಯದಲ್ಲಿ ರುವ ಕ್ರಷರ್ ನಲ್ಲಿ ನಡೆದಿದೆ

ಮದ್ಯಪ್ರದೇಶದ ಮೂಲದ ಕಾರ್ಮಿಕ ಹೇಮಂತ್ (19)ಈತ ಬುಧುವಾರ ರಾತ್ರಿ ಪಾಳಿಯಲ್ಲಿ ಕ್ರಷರ್ ನೂಳಗೆ ಬೋಡ್ರಸ್ ಅರೆಯುವ ಯಂತ್ರದ ಬಳಿ ಕೆಲಸ ನಿರ್ವಹಿಸುತ್ತುದ್ದು ಗುರವಾರ ಬೆಳಗಿನ ಜಾವ ಅಕಸ್ಮಿಕವಾಗಿ ಬೆಲ್ಟ್ ಸಿಕ್ಕ ಕೃ ಬಿಡಿಸಿಕೂಳ್ಳಲಾಗದೇ ಯಂತ್ರದೂಳಗೆ ಸಿಲುಕಿ ಸ್ಥಳದಲ್ಲಿ ಮೃತಪಟ್ಟಿದ್ದಾನೆ ಜೊತೆಯಲ್ಲಿದ್ದವರು ಯಂತ್ರ ನಿಲುಗಡೆ ಮಾಡಿ ವಿಷಯ ಮುಟ್ಟಿಸಿದ ಹಿನ್ನೆಲೆಯಲ್ಲಿ ಮೃತದೇಹವನ್ನು ಗುಂಡ್ಲುಪೇಟೆ ಸಾರ್ವಜನಿಕ ಅಸ್ಪತ್ರೆಗೆ ಸಾಗಿಸಿದ್ದಾರೆ

ಘಟನೆ ಸಂಬಂಧ ಕೇಸು ದಾಖಲಿಸಲಾಗಿದ್ದು ಮರಣ್ಣೋತ್ತರ ಪರೀಕ್ಷೆ ಸಲುವಾಗಿ ಮೃತದೇಹವನ್ನು ಗುರುವಾರ ಸಂಜೆ ಚಾಮರಾಜನಗರ ಜಿಲ್ಲಾ ಅಸ್ಪತ್ರೆ ಶವಗಾರಕ್ಕೆ ಸಾಗಿಸಲಾಗಿದೆ ಎಂದು ಪೋಲಿಸರು ತಿಳಿಸಿದ್ದಾರೆ.

ಸಂಸದ ಯದುವೀರ್ ಸೂಚನೆ

# ಬೀದಿಬದಿ ವ್ಯಾಪಾರಿಗಳ ವಲಯ ಸ್ಥಾಪಿಸಿ: ಸಂಸದ ಯದುವೀರ್

ಮೈಸೂರು: ಮೈಸೂರಿನಲ್ಲಿ ಸ್ವಚ್ಛತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕೆಲವು ಪರಿಣಾಮಕಾರಿ ಕೈಗೊಳ್ಳಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಬೀದಿ ಬದಿ ವ್ಯಾಪಾರಿಗಳ ವಲಯವನ್ನು ಸ್ಥಾಪಿಸಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೂಚನೆ ನೀಡಿದರು.

ಶುಕ್ರವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಸಂಸದ ಯದುವೀರ್, ಬೀದಿಬದಿ ಮಾರಾಟಗಾರರಿಗೆ ಪೂರಕವಾಗಿ ಕೆಲವು ಅಭಿವೃದ್ಧಿ

## ಹಾಕಿಂಗ್ ವಲಯ ಸ್ಥಾಪಿಸಿ

**ದಸರಾ ಮತ್ತು ಇತರ ಜಾತ್ರೆ, ಉತ್ಸವ, ರಥೋತ್ಸವ ಸಂದರ್ಭದಲ್ಲಿ ಒಳಹರಿವು ಹೆಚ್ಚಾದಾಗ ವಿಶೇಷ ಹಾಕಿಂಗ್ ವಲಯಗಳನ್ನು ರಚಿಸಬಹುದು. ಈ ನಿಟ್ಟಿನಲ್ಲಿಯೂ ಕ್ರಮ ಕೈಗೊಳ್ಳಬೇಕು ಎಂದು ಸಂಸದ ಯಧುವೀರ ಕೃಷ್ಣದತ್ತ ಚಾಮರಾಜ ಒಡೆಯರ ತಿಳಿಸಿದರು.**



ಕಾರ್ಯ ಕೈಗೊಳ್ಳಬೇಕಾದ ಅಗತ್ಯವಿದೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಬೀದಿ ಬದಿ ವ್ಯಾಪಾರಿಗಳಿಂದ ಯಾವುದೇ ತೊಂದರೆ ಎದುರಾಗಬಾರದು. ಮೈಸೂರಿನಲ್ಲಿ ಬೀದಿ ಮಾರಾಟ ವಲಯಗಳನ್ನು ಅಭಿವೃದ್ಧಿಪಡಿಸಲು ಅಧಿಕಾರಿಗಳು ಯೋಜನೆ ರೂಪಿಸಬೇಕು. ನಗರದಲ್ಲಿ ಸುರಕ್ಷತೆ, ಭದ್ರತೆ ಮತ್ತು ಸ್ವಚ್ಛತೆಯನ್ನು ಖಚಿತಪಡಿಸಬೇಕಾಗಿದೆ. ಎಲ್ಲಾ ಮಾರಾಟಗಾರರಿಗೆ ಸರಿಯಾದ ವ್ಯವಸ್ಥೆಗಳನ್ನು ಮಾಡಬೇಕು. ವಲಯಗಳನ್ನು ರಚಿಸುವ ಪ್ರಕ್ರಿಯೆಯಲ್ಲಿ ಯಾವುದೇ ವ್ಯಾಪಾರಿಗಳಿಗೆ ತೊಂದರೆಯಾಗಬಾರದು ಎಂದು ಹೇಳಿದರು.

ಎಲ್ಲಾ ಮಾರಾಟಗಾರರಿಗೆ ಸರಿಯಾದ ಮಾರ್ಗದರ್ಶನ ನೀಡಬೇಕು. ಮೈಸೂರು ಸ್ವಚ್ಛ ಮತ್ತು ಪರಂಪರೆಯ ನಗರವಾಗಿದೆ. ಈ ನಿಟ್ಟಿನಲ್ಲಿ ಮುಂದುವರಿಸಿಕೊಂಡು ಹೋಗಲು ಕೆಲವು ಪರಿಣಾಮಕಾರಿ ಯೋಜನೆ ರೂಪಿಸಬೇಕು. ಅದನ್ನು ಕಾರ್ಯಾನುಷ್ಠಾನ ಮಾಡಬೇಕು. ಕೆಲವು ಬೀದಿಬದಿ ವ್ಯಾಪಾರಿಗಳ ವಲಯಕ್ಕೆ ಅಧಿಕಾರಿಗಳೊಂದಿಗೆ ಭೇಟಿ ಮಾಡಿ ಪರಿಶೀಲನೆ ನಡೆಸುತ್ತೇನೆ. ಅತಿ ಶೀಘ್ರದಲ್ಲೇ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ತೀರ್ಮಾನಿಸಲಾಗಿದೆ ಎಂದರು. ಸಭೆಯಲ್ಲಿ ಹಿರಿಯ ಅಧಿಕಾರಿಗಳು, ವಿವಿಧ ಸಮಿತಿಯ ಪದಾಧಿಕಾರಿಗಳು ಹಾಜರಿದ್ದರು.

# ಜಗಜೀವನರಾಂ ಪ್ರತಿಮೆ ನಿರ್ಮಿಸುವಂತೆ ಮನವಿ



ಚಾಮರಾಜನಗರ, ಜಿಲ್ಲಾಡಳಿತಭವನದ ಆವರಣದಲ್ಲಿ ಹಸಿರುಕ್ರಾಂತಿಹರಿಕಾರ, ಭಾರತದ ಉಪಪ್ರಧಾನಿ, ಡಾ. ಬಾಬು ಜಗಜೀವನರಾಂ ಪ್ರತಿಮೆ ಸ್ಥಾಪಿಸಲು ಸರ್ಕಾರದ ವತಿಯಿಂದ ಅಗತ್ಯ ಅನುಧಾನವನ್ನು ಬಿಡುಗಡೆಮಾಡುವಂತೆ ಆಗ್ರಹಿಸಿ ಜಿಲ್ಲಾ ಮಾದಿಗಸಂಘಟನೆಗಳ ವತಿಯಿಂದ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅವರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಬಾಬು ಜಗಜೀವನರಾಂ ಒಬ್ಬ ಮಹಾನ್ ಮಾನವತಾವಾದಿ, ಕ್ರಾಂತಿಕಾರಿ ನಾಯಕ, ಚಿಂತಕ, ಧೀಮಂತ ರಾಷ್ಟ್ರನಾಯಕ, ಸಮಾನತೆಗಾಗಿ ದಿಟ್ಟ ಹೋರಾಟ ನಡೆಸಿದ ಪ್ರಜಾಪ್ರಭುತ್ವ ವಾದಿ. ಅ??ಟ ಅಲ್ಲ ಒಬ್ಬ ಮೌಲ್ಯಾಧಾರಿತ ರಾಜಕಾರಣ , ದೀರ್ಘಕಾಲ ಸಂಸತ್ ಸದಸ್ಯರಾಗಿ, ಉಪ ಪ್ರಧಾನಿ, ಕೇಂದ್ರ ಸಚಿವ ಸಂಪುಟದ ಮಂತ್ರಿಗಳಾಗಿ, ಹಿಂದುಳಿದ ದಲಿತ ಹಾಗೂ ಕಾರ್ಮಿಕ ಸಮುದಾಯದ ಭರವಸೆಯ ಬೆಳಕಾಗಿದ್ದರು.ಈಗಾಗಲೇ ಚಾಮರಾಜನಗರ ಜಿಲ್ಲಾ ಜಿಲ್ಲಾಡಳಿತಭವನದ ಆವರಣದಲ್ಲಿ ತನ್ನ ಡಾ. ಬಿ.ಆರ್. ಅಂಬೇಡ್ಕರ್ ವಿಶ್ವ ಗುರು ಬಸವಣ್ಣನವರ ಪುತ್ಥಳಿ ನಿರ್ಮಿಸಲಾಗಿದೆ. ಇದೇಆವರಣದಲ್ಲಿ ಭಗೀರಥ, ಮಹರ್ಷಿ, ವಾಲ್ಮೀಕಿ, ಭಕ್ತ ಕನಕದಾಸರ ಪ್ರತಿಮೆಯನ್ನು ನಿರ್ಮಿಸಲು ಈಗಾಗಲೇ ಗುದ್ದಲಿಪೂಜೆಯನ್ನು ಸಹ ನೆರವೇರಿಸಿ ಕಾಮಗಾರಿಯು ಪ್ರಗತಿಯ ಹಂತದಲ್ಲಿದೆ. ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು ಹಾಗೂ ಜಿಲ್ಲೆಯ ನಾಲ್ಕು ವಿಧಾನ ಸಭಾ ಕ್ಷೇತ್ರಗಳ ಶಾಸಕರು ಸಿಎಂ ಅವರ ಗಮನಕ್ಕೆ ಸೂಕ್ತ ಅನುದಾನ ಮಂಜೂರು ಮಾಡಿಸುವ ಮೂಲಕ ಬಾಬೂಜಿ ಪುತ್ಥಳಿ ನಿರ್ಮಿಸಲು ಕ್ರಮವಹಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಬಸವನಪುರ ರಾಜಶೇಖರ್, ಅರಕಲವಾಡಿ,ಜವರಯ್ಯ ಎಚ್,ಎಚ್. ನಾಗರಾಜು, ಹಸಗೂಲಿಸಿದ್ದಯ್ಯ, ಶಿವಕುಮಾರ್ ರಾಮಸಮುದ್ರ ಮಲ್ಲಮ್ಮಹುಂಡಿ, ಚನ್ನಬಸವಯ್ಯ, ಎಂ,ಶಿವಕುಮಾರ್, ಆರ್,ಎನ್,ಶಿವಣ್ಣ, ಮೂಡಹಳ್ಳಿ ಎಚ್.ಮೂರ್ತಿ, ಕೆಸ್ತೂರುಮರಪ್ಪ, ಬೆಳ್ಳಿಯಪ್ಪ, ನಾಗಮಲ್ಲು, ದ್ವಾರಕಿ ಬಸವರಾಜು, ಮೂಡಹಳ್ಳಿ ಶಂಕರ್, ರಾಮಸಮುದ್ರ ಶಿವಕುಮಾರ್, ಮರಿಸ್ವಾಮಿ ಬದನಗುಪ್ಪೆ ರಂಗಸ್ವಾಮಿ ಚಿಕ್ಕ ಕೆಂಪಿಹುಂಡಿ ಸುಂದರ್, ದೇವರಾಜು, ಲಿಂಗರಾಜು, ಸಿದ್ದರಾಜು, ಜಯಪ್ಪಸ್ವಾಮಿ ಭಾಗವಹಿಸಿದ್ದರು.

# ಭೀಮ ಕೋರೆಗಾಂವ್ ವಿಜಯೋತ್ಸವ



ಚಾಮರಾಜನಗರ: 208ನೇ ಭೀಮ ಕೊರೆಗಾಂವ್ ವಿಜಯೋತ್ಸವದ ಅಂಗವಾಗಿ ಅಂಬೇಡ್ಕರ್ ಅನುಯಾಯಿಗಳ ಬಳಗ ಮತ್ತು ಕಾನ್ಸಿರಾಂ ವಿದ್ಯಾರ್ಥಿ ಸಂಘದ ವತಿಯಿಂದ ನಗರದಲ್ಲಿ ಬೈಕ್ ರ್ಯಾಲಿ ನಡೆಯಿತು.

ರಾಮಸಮುದ್ರದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಬೈಕ್ ರ್ಯಾಲಿಗೆ ಚಾಲನೆ ನೀಡಿ ಶುಭ ಕೋರಿದರು.

ಬಳಿಕ ಬೈಕ್ ರ್ಯಾಲಿ ರಾಮಸುಮುದ್ರದಿಂದ ಹೊರಟು, ಭುವನೇಶ್ವರಿ ವೃತ್ತ, ಡಿಯೇಷನ್ ರಸ್ತೆ,, ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತದ ಮೂಲಕ ಮತ್ತೆ ಭುವನೇಶ್ವರ ವೃತ್ತಕ್ಕೆ ಬಂದು ತಲುಪಿತು. ಬಳಿಕ ಜಿಲ್ಲಾಡಳಿತ ಭವನದಲ್ಲಿ ಅಂತ್ಯಗೊಂಡಿತು. ಈ ಸಂದರ್ಭದಲ್ಲಿ ವಕೀಲರಾದ ಮಹೇಂದ್ರ, ಕಾನ್ಸಿರಾಂ ವಿದ್ಯಾರ್ಥಿ ಸಂಘದ ಜಿಲ್ಲಾಧ್ಯಕ್ಷ ವಾಸು, ಹೊಂಡರಬಾಳು, ಭೀಮರಾಂ ಅಂಬೇಡ್ಕರ್ ಸೇನೆ ಜಿಲ್ಲಾಧ್ಯಕ್ಷ ಅಮಿತ್, ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ರಮೇಶ್, ಸಿ.ಕೆ. ಮಂಜುನಾಥ್, ಸಿ.ಎಂ.ಶಿವಣ್ಣ, ಬಿಎಸ್‌ಪಿ ಎಸ್.ಪಿ. ಮಹೇಶ್ ಕಾಂತರಾಜು, ಬಾಬು, ಅಕ್ಷಯ್, ಸ್ವಾಮಿ ಮಧು, ಗಣೇಶ್, ಸುಭಾಷ್ ಇತರರು ಹಾಜರಿದ್ದರು.

'ಡ್ರಗ್ಸ್ ಮಾರಾಟಕ್ಕೆ ಕಡಿವಾಣ ಹಾಕುವಲ್ಲಿ ರಾಜ್ಯಸರ್ಕಾರ ವಿಫಲ

# ಕರ್ನಾಟಕ ಸೇನಾಪಡೆಯಿಂದ ಪ್ರತಿಭಟನೆ

ಚಾಮರಾಜನಗರ ಡ್ರಗ್ಸ್ ಮಾರಾಟಕ್ಕೆ ಕಡಿವಾಣ ಹಾಕುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಆರೋಪಿಸಿ ನಗರದಲ್ಲಿ ಕರ್ನಾಟಕಸೇನಾಪಡೆ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಯಿತು.

ನಗರದ ಭುವನೇಶ್ವರಿವೃತ್ತದಲ್ಲಿ ಜಮಾವಣೆಗೊಂಡ ಸಂಘಟನೆ ಕಾರ್ಯಕರ್ತರು ಡ್ರಗ್ಸ್ ಮಾರಾಟಕ್ಕೆ ಸರ್ಕಾರ ಕಡಿವಾಣ ಹಾಕುವಲ್ಲಿ ರಾಜ್ಯಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಇದೇವೇಳೆ ಕರ್ನಾಟಕ ಸೇನಾಪಡೆ ಸಂಘಟನೆ ಅಧ್ಯಕ್ಷ ಚಾರಂಶ್ರೀನಿವಾಸಗೌಡ ಮಾತನಾಡಿ, ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾ ಅವ್ಯಾಹತವಾಗಿ ನಡೆಯುತ್ತಿದೆ. ಆದರೂ ರಾಜ್ಯಸರ್ಕಾರ ಇದನ್ನು ತಡೆಯುವ ನಿಟ್ಟಿನಲ್ಲಿ ಗಂಭೀರವಾಗಿ ಪರಿಗಣಿಸಿಲ್ಲ. ಹೊಸವರ್ಷಾಚರಣೆ ವೇಳೆ ಯುವಕ. ಯುವತಿಯರು ಡ್ರಗ್ಸ್ ಸೇವನೆಗೊಳಗಾಗಿ ತಾವು ಯಾರೆಂಬುದನ್ನೇ ಮರೆತಿದ್ದರು. ಅಷ್ಟರ ಮಟ್ಟಿಗೆ ಡ್ರಗ್ಸ್ ಅವರ ಮೇಲೆ ಪರಿಣಾಮಬೀರಿತ್ತು. ಇದಕ್ಕೆ ಪೂರಕವಾಗಿ ಬೆಂಗಳೂರಿನಲ್ಲಿ ಡ್ರಗ್ಸ್ ತಯಾರಿಕಾ ಕಾರ್ಖಾನೆಗಳು ಪತ್ತೆಯಾಗಿರುವುದು ಡ್ರಗ್ಸ್ ಮಾಫಿಯಾ ದಂದೆಗೆ ಪುಷ್ಠಿ ನೀಡಿದೆ., ಕೂಡಲೇ ರಾಜ್ಯಸರ್ಕಾರ ಎಚ್ಚೆತ್ತುಕೊಂಡು, ವಿದ್ಯಾರ್ಥಿಗಳು ಹಾಗೂ ಯುವಜನರ ಬದುಕಿಗೆ ಮರಣಶಾಸನವಾದ ಮಾರಕ ಡ್ರಗ್ಸ್ ಮಾರಾಟಕ್ಕೆ ಕಡಿವಾಣ ಹಾಕಬೇಕು, ದೇಶದ ಯುವಕರ ಬದುಕನ್ನು ಹಸನುಗೊಳಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ನಿಜಧನಿಗೋವಿಂದರಾಜು, ಪಣ್ಯದಹುಂಡಿ ರಾಜು, ಲಿಂಗರಾಜು, ತಾಂಡವಮೂರ್ತಿ, ರವಿಚಂದ್ರಪ್ರಸಾದ್, ಎಸ್‌ಪಿಬಿಬಳಗದ ಶಿವಣ್ಣ, ಡ್ಯಾನ್ಸ ಬಸವರಾಜು, ರಾಜಣ್ಣ, ಮುತ್ತುರಾಜು, ಸುರೇಶ್‌ಗೌಡ, ರಾಜು, ಹೊನ್ನಹಳ್ಳಿನಾಗಪ್ಪ, ಹೆಗ್ಗೊಠಾರ ಶಿವಸ್ವಾಮಿ, ಲೋಕೇಶ್, ನಾಗೇಂದ್ರ ನಾಗರಾಜು, ಭಾಗವಹಿಸಿದ್ದರು.

# ಆದರ್ಶ ಶಾಲೆಯಲ್ಲಿ ಆರ್‌ಓ ಘಟಕ ಉದ್ಘಾಟಿಸಿದ ಪಿ.ಕೆ.ರಾಮಕೃಷ್ಣ

ಚಾಮರಾಜನಗರ, ನಗರದ ಆದರ್ಶ ವಿದ್ಯಾಲಯದಲ್ಲಿ ರೋಟರಿ ಸಂಸ್ಥೆಯ ವತಿಯಿಂದ ಅಳವಡಿಸಿರುವ ತಣ್ಣೀರು, ಬಿಸಿನೀರಿನ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಇಂಟರ್ಯಾಕ್ಟ್ ಕ್ಲಬ್, ಅರೋಗ್ಯ ತಪಾಸಣಾ ಶಿಬಿರವನ್ನು ರೋಟರಿ ಜಿಲ್ಲಾ ಗೌರ್ನರ್ ಪಿ.ಕೆ.ರಾಮಕೃಷ್ಣ ಉದ್ಘಾಟಿಸಿದರು.

ಶಾಲಾವರಣದಲ್ಲಿ ಪಿ.ಕೆ.ರಾಮಕೃಷ್ಣ ಅವರು ಹುಟ್ಟುಹಬ್ಬದ ಅಂಗವಾಗಿ ರೋಟರಿ ಸಂಸ್ಥೆಯ ವತಿಯಿಂದ ಸಸಿ ನಡೆಸಲಾಯಿತು. ನಂತರ ಶಾಲೆಯಲ್ಲಿ ನಡೆದ ಇಂಟರ್ಯಾಕ್ಟ್ ಕ್ಲಬ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ರೋಟರಿ ಸಂಸ್ಥೆಯು ಒಂದು ಸೇವಾ ಸಂಸ್ಥೆಯಾಗಿದ್ದು, ಆರೋಗ್ಯ, ಶಿಕ್ಷಣ, ಪರಿಸರ ಕ್ಷೇತ್ರಗಳಲ್ಲಿ ಸೇವೆ ಮಾಡುವ ಜೊತೆಗೆ ಸಾರ್ವಜನಿಕರ ಅನುಕೂಲಕರ ಕೆಲಸ ಮಾಡುತ್ತಿದೆ. ಅದೇ ರೀತಿಯಲ್ಲಿ ಚಾಮರಾಜನಗರ ಕ್ಲಬ್ ಅನೇಕ ಸೇವಾ ಕಾರ್ಯಗಳನ್ನು ಮಾಡುತ್ತಿದ್ದು ಶಾಲೆಯಲ್ಲಿ ರೋಟರಿ ಇಂಟರ್ಯಾಕ್ಟ್ ಕ್ಲಬ್ ಸ್ಥಾಪಿಸುವ ವಿದ್ಯಾರ್ಥಿಗಳಲ್ಲಿ ಸೇವೆಗಿಂತ ಶ್ರೇಷ್ಠತೆ ಎಂಬ ತತ್ವದೊಂದಿಗೆ ನಾಯಕತ್ವ ಕೌಶಲ್ಯಗಳನ್ನು ಬೆಳೆಸುವುದು ಮತ್ತು ಸಾಮಾಜಿಕ ಸೇವೆ ಮಾಡುವ ಅರಿವು ಮೂಡಿಸುತ್ತದೆ ಎಂದರು. ಸಹಾಯಕ ಗೌರ್ನರ್ ದೊಡ್ಡರಾಯಪೇಟೆ ಗಿರೀಶ್, ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು, ಕಾರ್ಯದರ್ಶಿ ಕೆಂಪನಪುರ ಸಿದ್ದರಾಜು, ಶಾಲೆಯ ಮುಖ್ಯ ಶಿಕ್ಷಕ ಅರ್ಕಪ್ಪ ಹಾಗೂ ಪದಾಧಿಕಾರಿಗಳು ಹಾಜರಿದ್ದರು.



# ಮಕ್ಕಳ ಪ್ರತಿಭೆ ಪ್ರೋತ್ಸಾಹಿಸಲು ಪ್ರತಿಭಾ ಕಾರಂಜಿ ಪೂರಕ

## ಶಾಸಕ ಸಿ.ಪುಟ್ಟರಂಗಶೆಟ್ಟಿ ಕರೆ । ಕಲೋತ್ಸವ ಸಮಾರಂಭ



ಚಾಮರಾಜನಗರ: ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಯಾವುದೇ ಕೊರತೆಯಾಗದಂತೆ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿಕೊಡಲಾಗಿದೆ. ಮಕ್ಕಳಲ್ಲಿರುವ ಸುಪ್ತ ಪ್ರತಿಭೆಗಳನ್ನು ಅನಾವರಣಗೊಳಿಸಲು ಪ್ರತಿಭಾ ಕಾರಂಜಿ ಪೂರಕವಾಗಿದೆ ಎಂದು ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಸಂತ ಜೋಸೆಫರ ಶಾಲೆಯಲ್ಲಿ ಜಿಲ್ಲಾಡಳಿತ ಮತ್ತು ಜಿ.ಪಂ. ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರತಿಭಾ ಕಾರಂಜಿ ಎಂಬುದು ಕರ್ನಾಟಕದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಪ್ರತಿಭೆಗಳನ್ನು ಹೊರತರುವ, ಅವರ ವ್ಯಕ್ತಿತ್ವ ವಿಕಸನಕ್ಕೆ ಸಹಾಯ ಮಾಡುವ ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಇಲಾಖೆಯ ಒಂದು ವಿನೂತನ ಮತ್ತು ವಿಸ್ತ್ರತ ಕಾರ್ಯಕ್ರಮವಾಗಿದ್ದು, ಕ್ಲಸ್ಟರ್, ಬ್ಲಾಕ್, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಕವನ ವಾಚನ, ಗಾಯನ, ಚಿತ್ರಕಲೆ, ಪ್ರಬಂಧ, ಚರ್ಚೆ ಮುಂತಾದ ವಿವಿಧ ಸ್ಪರ್ಧೆಗಳನ್ನು ನಡೆಸುತ್ತದೆ. ಇದು ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಒಂದು ಸಾಮಾನ್ಯ ವೇದಿಕೆ ಒದಗಿಸಿ, ಶಿಕ್ಷಣದ

ಮನರಂಜನೆಯನ್ನು ಸಂಯೋಜಿಸುತ್ತದೆ. ವಿದ್ಯಾರ್ಥಿಗಳಲ್ಲಿರುವ ಕಲಾಭಿರುಚಿಯ ಸಾಮರ್ಥ್ಯವನ್ನು ಸಾಬೀತು ಮಾಡಲು ಇದೊಂದು ಉತ್ತಮ ವೇದಿಕೆಯಾಗಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರಪಾಟೀಲ್ ಪ್ರಾಸ್ತಾವಿಕ ವಾಗಿ ಮಾತನಾಡಿ, ಮಕ್ಕಳಲ್ಲಿರುವ ಸೂಪ್ತ ಕಲೆಗಳನ್ನು ಗುರುತಿಸಿ ಪೋತ್ಸಾಹಿಸಲು ಪ್ರತಿಭಾ ಕಾರಂಜಿ ಸಹಕಾರಿಯಾಗಿದೆ.ಅತ್ಯಂತ ಪ್ರತಿಭಾವಂತ ಶಿಕ್ಷಕರು ಇದ್ದಾರೆ ಉತ್ತಮ ರೀತಿಯಲ್ಲಿ ಭೋಧನೆ ಮಾಡುತ್ತಿದ್ದಾರೆ. ಶಿಕ್ಷಣ ಇಲಾಖೆಯ ಗುಣಮಟ್ಟದ ಹೆಚ್ಚಿಸಿ ಮಕ್ಕಳಿಗೆ ಬದುಕುವ ಕಲೆಯನ್ನು ಬೆಳಸೋಣ ಎಂದರು.

ಬಿಇಒ ಹನುಮಶೆಟ್ಟಿ ಸ್ವಾಗತ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಬಿಆರ್ ಸಿ ರಾಜೀವ್, ಬಿಸಿಯೂಟ ಸಮನ್ವಯ ಅಧಿಕಾರಿ ಶ್ರೀನಿವಾಸ್ ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕ ಶಂಕರ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಕಾರ್ಯದರ್ಶಿ ಸುಧಾ, ಸರ್ಕಾರಿ ನೌಕರರ ಸಂಘ ಜಿಲ್ಲಾ ಕಾರ್ಯಾಧ್ಯಕ್ಷ ಮಹಾದೇವಸ್ವಾಮಿ, ಕಾರ್ಯದರ್ಶಿ ಭರತ್ ಭೂಷಣ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾ ಕಾರ್ಯದರ್ಶಿ ಕಿರಣ್ ರಾಜ್, ಉಪಾಧ್ಯಕ್ಷ ಎಂ.ಡಿ.ಮಹದೇವಯ್ಯ, ಎಸ್ ಸಿ ಎಸ್ ಟಿ ನೌಕರರ ಸಂಘದ ಅಧ್ಯಕ್ಷ ಕೆಂಪರಾಜು, ಬಡ್ತಿ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಮಹದೇವಮೂರ್ತಿ, ನಿರ್ದೇಶಕ ರಾಜು, ಸಿ ಆರ್ ಪಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ನಾಳೆ ಲಯನ್ ಪ್ರಾಂತೀಯ ಸಮ್ಮೇಳನ

ಮೈಸೂರು: ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ 317 ರ ಪ್ರಾಂತೀಯ ಸಮ್ಮೇಳನ ಜ. 4 ರಂದು ಬೆಳಗ್ಗೆ 8.30ಕ್ಕೆ ವಿದ್ಯಾರಣ್ಯಪುರಂ ಬಿಲ್ರ?ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಭಾಂಗಣದಲ್ಲಿ ನಡೆಯಲಿದೆ ಎಂದು ಪ್ರಾಂತೀಯ ಅಧ್ಯಕ್ಷ ಪಿ. ಹೊನ್ನರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಂಗಾಯಣದ ಮಾಜಿ ನಿರ್ದೇಶಕ ಡಾ.ಎಚ್. ಜನಾರ್ಧನ್ ಜನ್ನಿ ಮಾನವೀಯತೆ ಮೊದಲ ಆದ್ಯತೆ ವಿಷಯ ಕುರಿತು ಮಾತನಾಡುವರು, ಡಾ.ಎನ್. ಕೃಷ್ಣಗೌಡ ಅತಿಥಿಗಳಾಗಿರುವರು, ತಾವು ಅಧ್ಯಕ್ಷತೆ ವಹಿಸುವುದಾಗಿ ತಿಳಿಸಿದರು.

ಈ ವೇಳೆ ಸುಮಾರು 1.75 ಲಕ್ಷ ಮೊತ್ತದಲ್ಲಿ 35 ಕೃತಕ ಕಾಲು ವಿತರಿಸಲಾಗುವುದು, ಸಂತೆ ಸರಗೂರಿನ ಶಾಲಾ ಕಟ್ಟಡ ಅಭಿವೃದ್ಧಿಗೆ 50 ಸಾವಿರ ರೂ.,ಗಳ ಚೆಕ್, ಓರ್ವ ಬಡ ಮಹಿಳೆಗೆ ಒಂದು ಹೊಲಿಗೆ ಯಂತ್ರ ವಿತರಿಸಲಾಗುವುದು. ಜೀವಮಾನ ಸಾಧನೆ ಪ್ರಶಸ್ತಿಗಳನ್ನು ಎಂ. ಪಂಚಲಿಂಗೇಗೌಡ, ವೀಣಾ ಅಶೋಕ್, ಎಚ್. ಖುಷಿ, ಕೆ.ಪಿ. ಶಿವಪ್ರಸಾದ್ ಹಾಗೂ ಲಯನ್ ಜೈಪ್ರಕಾಶ್ ಅವರಿಗೆ ಪ್ರದಾನ ಮಾಡಲಾಗುವುದೆಂದರು. ಎಂ.ಎನ್. ಜೈಪ್ರಕಾಶ್, ಎಂ.ವಿ. ನಂದೀಶ್, ಸಿ. ಶಂಕರ್ ಹಾಗೂ ಇನ್ನಿತರರು ಇದ್ದರು



ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಇಂದು ದಿನದರ್ಶಿಕೆ ಬಿಡುಗಡೆ



ಮೈಸೂರು: ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ಸಂಘದ ಕ್ಯಾಲೆಂಡರ್ ಹಾಗೂ ದಿನಚರಿ ಬಿಡುಗಡೆ ಕಾರ್ಯಕ್ರಮ ಜ. 3 ರಂದು ಸಂಜೆ 4ಕ್ಕೆ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಅಧ್ಯಕ್ಷ ಎಂ.ಎಂ. ರಾಜೇಂದ್ರ ಕುಮಾರ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಶಾಸಕ ಜಿ.ಟಿ. ದೇವೇಗೌಡ ಉದ್ಘಾಟಿಸುವರು, ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ದಿನಚರಿ, ಶಾಸಕ ಟಿ.ಎಸ್. ಶ್ರೀವತ್ಸ ಕ್ಯಾಲೆಂಡರ್ ಬಿಡುಗಡೆಗೊಳಿಸುವರು. ಮತ್ತೋರ್ವ ಶಾಸಕ ಕೆ. ಹರೀಶ್‌ಗೌಡ ಅಸಂಘಟಿತ ಕಾರ್ಮಿಕ ಕಾರ್ಡ್ ವಿತರಿಸುವರು, ಬಸವರಾಜ್ ಮುಖ್ಯ ಅತಿಥಿಗಳಾಗಿರಲಿದ್ದು, ತಾವು ಅಧ್ಯಕ್ಷತೆ ವಹಿಸುವುದಾಗಿ ಹೇಳಿದರು. ಉಪಾಧ್ಯಕ್ಷ ಸಿ. ಅಭಿನಂದನ್ ಮಾತನಾಡಿ, ಪ್ರತಿಭಾ ಪುರಸ್ಕಾರ, ಛಾಯಾ ಸಾಧಕರಿಗೆ ಗೌರವ, ಉನ್ನತ ಶಿಕ್ಷಣ ಪಡೆದವರಿಗೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮ ಇರಲಿವೆ ಎಂದರು. ಎಂ.ಎಸ್. ಶ್ರೀನಿಧಿ, ಜಿ.ಟಿ. ಸುರೇಶ್‌ಕುಮಾರ್, ಎಚ್.ಎನ್. ಶ್ರೀನಿವಾಸ್ ಇದ್ದರು.

# ಜಿಲ್ಲಾಧಿಕಾರಿ ವರ್ಗಾವಣೆ ಖಂಡಿಸಿ ಪ್ರತಿಭಟನೆ




ಚಾಮರಾಜನಗರ: ಜಿಲ್ಲಾಧಿಕಾರಿ ವರ್ಗಾವಣೆ ಖಂಡಿಸಿ ಸಮೂಹಿಕ ನಾಯಕತ್ವದ ರಾಜ್ಯ ರೈತ ಸಂಘದ ಜಿಲ್ಲಾ ಘಟಕ ಹಾಗೂ ಯುವ ಕಲಾವಿದರ ಬಳಗದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.


ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಮೆರವಣಿಗೆ ಮೂಲಕ ಶ್ರೀಭುವನೇಶ್ವರಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಕೆಲಕಾಲ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ರೈತರು, ಬುಡಕಟ್ಟು ಸಮುದಾಯದವರು, ದಲಿತರು ಹಾಗೂ ಸಾಮಾನ್ಯ ಜನರ ಪರವಾಗಿ ಕೆಲಸವನ್ನು ಮಾಡುತ್ತಿದ್ದರು. ಜಿಲ್ಲೆಯ ಅಭಿವೃದ್ಧಿಗೆ ಕೆಲವು ಮಹತ್ತರ ಯೋಜನೆಗಳನ್ನು ಹಾಕಿಕೊಂಡಿದ್ದರು. ಶಿಲ್ಪಾನಾಗ್ ಅವರು ಅಧಿಕಾರವಹಿಸಿಕೊಂಡ ಮೇಲೆ ರೈತರ ಸಾಕಷ್ಟು ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಿದ್ದರು. ಅದರಲ್ಲೂ ಕಾಡಂಚಿನ ಗ್ರಾಮಗಳಿಗೆ ಮೂಲಸೌಕರ್ಯ ಕಲ್ಪಿಸಲು ಸಾಕಷ್ಟು ಶ್ರಮವಹಿಸಿದ್ದರು ಎಂದು ಹೇಳಿದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರ ವರ್ಗಾವಣೆಯನ್ನು ಸರ್ಕಾರ ಕೂಡಲೇ ರದ್ದುಗೊಳಿಸಬೇಕು. ಇಲ್ಲವಾದರೇ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆಯನ್ನು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಪಾಪಣ್ಣ, ಷಣ್ಮುಖ, ಬಂದಿಗೌಡನಹಳ್ಳಿ ನಟರಾಜು, ಮಹೇಶ್, ವಡ್ಡಗೆರೆ ಪ್ರಸಾದ್, ಶಿವಕುಮಾರಸ್ವಾಮಿ, ಕಲಾವಿದರ ಬಳಗದ ಶಿವಶಂಕರ್ ಚಟ್ಟು, ದಡದಹಳ್ಳಿ ರಮೇಶ್, ಮಿಮಿಕ್ರಿ ಮಲ್ಲಣ್ಣ ಹಾಗೂ ಇತರರು ಭಾಗವಹಿಸಿದ್ದರು.

# ಪತ್ರಿಕೆಗಳು ಜನರಿಗೆ ಉತ್ತಮ ಸಂದೇಶ ನೀಡುತ್ತವೆ



ಚಾಮರಾಜನಗರ, ಪತ್ರಿಕೆಗಳು ಉತ್ತಮ ಸಂದೇಶ ನೀಡಿ ಜನರ ಸಮಸ್ಯೆಗಳಿಗೆ ಸಹಕಾರಿಯಾಗಿವೆ ಎಂದು ಎಂಎಸ್‌ಐಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು. ನಗರದ ಪ್ರವಾಸಿ ಮಂದಿರದಲ್ಲಿ ಸ್ವಯಂ ಪ್ರೇರಣೆ ಪತ್ರಿಕೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಪತ್ರಿಕೆಗಳಲ್ಲಿ ಇತರರ ಬಗ್ಗೆ ಬರೆದು ತೇಜೋವಧೆ ಮಾಡಬಾರದು ಇದರಿಂದ ಅವರಿಗೆ ತುಂಬಾ ತೊಂದರೆ ಆಗುತ್ತದೆ. ಪತ್ರಿಕೆಯಲ್ಲಿ ಪ್ರಾಮಾಣಿಕತೆ ಇರಬೇಕು, ಸಂವಿಧಾನದಲ್ಲಿ ಎಲ್ಲರ ಹಿತ ಕಾಯುವಂತಹ ಹಕ್ಕುಗಳಿವೆ, ಆದ್ದರಿಂದ ಪತ್ರಿಕೆ ಸುದ್ದಿ ಮೌಲ್ಯ ಹೊಂದಿರಬೇಕು ಎಂದು ಹೇಳಿದರು.

ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಅವರು ಸ್ವಯಂ ಪ್ರೇರಣೆ ಪತ್ರಿಕೆಯ ನೂತನ ವರ್ಷದ ಕ್ಯಾಲೆಂಡರ್ (ದಿನದರ್ಶಿಕೆ) ಅನ್ನು ಬಿಡುಗಡೆ ಮಾಡಿ ಮಾತನಾಡಿ ಪತ್ರಿಕೆಗಳಿಂದ ಸಮಾಜದ ಅಂಕು-ಡೊಂಕುಗಳನ್ನು ತಿದ್ದುವ ಕೆಲಸವಾಗಬೇಕು. ಪತ್ರಿಕೆಗಳ ಮೇಲೆ ಜನರು ಇಟ್ಟಿರುವ ನಿರೀಕ್ಷೆಗಳನ್ನು ಹುಸಿಗೊಳಿಸದೆ ನೈಜ ಸುದ್ದಿಗಳನ್ನು ಪ್ರಕಟಿಸಬೇಕು ಎಂದು ಸಲಹೆ ನೀಡಿದರು.

ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಮಾಜಿ ಸದಸ್ಯ ಮಹದೇವು ಸೋಮವಾರಪೇಟೆ, ಪಿಡಬ್ಲ್ಯೂಡಿ ಗುತ್ತಿಗೆದಾರ ಹೆಚ್.ಹೆಚ್. ನಾಗರಾಜು, ಜಯಚಾಮರಾಜ ಇವಿ ಮೋಟಾರ್ ಮಾಲಿಕ ಸುರೇಶ್ ಗೌಡ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು, 'ಸ್ವಯಂ ಪ್ರೇರಣೆ' ಪತ್ರಿಕೆಯ ಸಂಪಾದಕ ಇರಸವಾಡಿ ಸಿದ್ದಪ್ಪಾಜಿ, ಡಿಎಸ್‌ಎಸ್ (ಪ್ರೊ. ಡಿಜಿ ಸಾಗರ್ ಬಣ)ಜಿಲ್ಲಾ ಸಂಚಾಲಕ ಸಿ.ಎಂ. ಶಿವಣ್ಣ, ಪ್ರಾಧ್ಯಾಪಕ ಬಸವಣ್ಣ ಮೂಕಳ್ಳಿ, ನಗರಸಭಾ ನಾಮನಿರ್ದೇಶಿತ ಸದಸ್ಯ ಸ್ವಾಮಿ, ಇತರರು ಭಾಗವಹಿಸಿದ್ದರು.

ಸಹಕಾರಿ ಸಪ್ತಾಹ ದಿನ

# ಮರಿಯಾಲ ಶ್ರೀಗಳಿಂದ ಸಹಕಾರ ಧ್ವಜಾರೋಹಣ



ಚಾಮರಾಜನಗರ, ತಾಲೂಕಿನ ಮರಿಯಾಲದ ಶ್ರೀ ಮುರುಘರಾಜೇಂದ್ರಸ್ವಾಮಿ ಸೌಹಾರ್ದ ಸಹಕಾರಿ ಸಂಘದಲ್ಲಿ ಸಹಕಾರಿ ಸಪ್ತಾಹ ದಿನಾಚರಣೆಯ ಪ್ರಯುಕ್ತ ಸಂಘದ ಸಂಸ್ಥಾಪಕರು ಹಾಘೂ ಶ್ರೀ ಮುರುಘ ರಾಜೇಂದ್ರಸ್ವಾಮೀಜಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಸಹಕಾರಿ ಧ್ವಜಾರೋಹಣ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಸಹಕಾರ ಕ್ಷೇತ್ರದ ರೈತರು ಹಾಗೂ ಮಧ್ಯಮ ವರ್ಗಗಳ ಪ್ರಗತಿಗೆ ಉತ್ತಮ ವೇದಿಕೆಯಾಗಿದ್ದು, ಸಹಕಾರ ಎಂದರೆ, ಪರಸ್ಪರ ಸಹಕಾರದಿಂದ ಪ್ರಗತಿ ಹೊಂದುವುದು ಎಂಬರ್ಥ. ಸಹಕಾರ ಸಂಘದ ಮುನ್ನಡೆಬೇಕಾದರೆ ಅಡಳಿತ ಮಂಡಲಿ ಹಾಗೂ ನೌಕರರ ಶ್ರಮ ಬಹಳ ಹೆಚ್ಚಿನದು. ಷೇರುದಾರರ ಸಹ ಸಂಘದ ಜೀವಾಳವಾಗಿದ್ದಾರೆ. ಸಹಕಾರ ತತ್ವದಲ್ಲಿ ಸಹಬಾಳ್ವೆ ಇದೆ ಎಂದರು. ಸಂಘದ ಗೌರವಾಧ್ಯಕ್ಷರಾದ ಶ್ರೀ ಕಾಳನಹುಂಡಿ ಜಿ. ಕುಮಾರಸ್ವಾಮಿ ಸಂಘದ 2026ನೇ ನೂತನ ವರ್ಷದ ದಿನದರ್ಶಿಕೆಯನ್ನು ಶ್ರೀಗಳು ಹಾಗೂ ಸಂಘದ ಗೌರವಾಧ್ಯಕ್ಷರಾದ ಕಾಳನಹುಂಡಿ ಜಿ. ಕುಮಾರಸ್ವಾಮಿ ಬಿಡುಗಡೆಗೊಳಿಸಿ ಮಾತನಾಡಿ, ಪ್ರಾಮಾಣ ಕತೆಯಿಂದ ಇದ್ದರೆ ಮಾತ್ರ ಸಹಕಾರ ಸಂಘಗಳ ಬೆಳವಣ ಗೆಗೆ ಸಾಧ್ಯವಾಗುತ್ತದೆ. ಕಳೆದ ಏಳು ವರ್ಷಗಳಿಂದಲೂ ಸಂಘವು ಪ್ರಾಮಾಣ ಕತೆಯಿಂದ ನಡೆದು ಬಂದಿರುವುದರಿಂದ ಲಾಭಾಂಶದಲ್ಲಿ ಬಂದಿದೆ. ಸದಸ್ಯರ ಆರ್ಥಿಕ ಸಂಕಷ್ಟಕ್ಕೆ ಸಹಕಾರಿಯಾಗಿದೆ. ಸದಸ್ಯರು ಪಡೆದ ಸಾಲವನ್ನು ಮರುಪಾವತಿ ಮಾಡುವುದರ ಮೂಲಕ ಸಂಘದ ಅಭಿವೃದ್ಧಿಗೆ ಎಲ್ಲರೂ ಬದ್ಧರಾಗಿರಬೇಕು ಎಂದರು.

ಸಂಘದ ಕಾನೂನು ಸಲಹೆಗಾರ ಅರಳಿಕಟ್ಟೆ ಸಿದ್ದರಾಜು, ಸಂಘದ ಬದ್ಧತೆ ಹಾಗೂ ಸಾಲ ಮರುಪಾವತಿಯ ಬಗ್ಗೆ ಹೇಳಿದರು. ಈ ಸಂದರ್ಭದಲ್ಲಿ ದಿನದರ್ಶಿಕೆ ಪ್ರಯೋಜಕರಾದ ನಾಗೇಶ್, ಮಹೇಶ್, ಸಿದ್ದೇಶಣ್ಣ ಹಾಗೂ ವಕೀಲ ಮಹದೇವಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘ, ಅಧ್ಯಕ್ಷರಾದ ಬಿ. ನಂಜುಂಡಸ್ವಾಮಿ ಉಪಾಧ್ಯಕ್ಷರಾದ ಜಿ. ಪ್ರಸನ್ನ ರವರು ಹಾಗೂ ನಿರ್ದೇಶಕಗಳಾದ ಪಿ. ಮಹದೇವಸ್ವಾಮಿ, ಶಂಭು, ಹೆಚ್. ಆರ್. ಮಂಜು, ಶ್ರೀನಿವಾಸ್, ಜಯರಾಜ್, ಎಂ. ಆರ್ ಸ್ವಾಮಿ, ಕೆ. ಸಿ. ಮಹೇಂದ್ರ, ಗಿರೀಶ್, ನಂದಿನಿ, ಸೀತಾಲಕ್ಷ್ಮಿ, ನಾಗು ಹಾಗೂ ಸಿಇಓ ಸೌಮ್ಯ ಉಪಸ್ಥಿತರಿದ್ದರು.

# ಉದ್ಯೋಗ ಸೃಜನೆ ಬಗ್ಗೆ ಯುವಜನತೆಗೆ ಅರಿವು ಮೂಡಿಸಿ: ಜಿಲ್ಲಾಧಿಕಾರಿ ಡಾ.ಕುಮಾರ





**ಮಂಡ್ಯ:** ನಿರುದ್ಯೋಗಿಗಳನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಿಸಲು ಪ್ರಧಾನ ಮಂತ್ರಿ ಉದ್ಯೋಗ ಸೃಜನೆ ಯೋಜನೆಯನ್ನು ಜಾರಿಗೊಳಿಸಲಾಗಿದೆ ಸದರಿ ಯೋಜನೆಗಳ ಕುರಿತು ಜಿಲ್ಲೆಯ ನಿರುದ್ಯೋಗಿಗಳಿಗೆ ಅರಿವು ಮೂಡಿಸಿ ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ಶುಕ್ರವಾರ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನೆ ಕಾರ್ಯಕ್ರಮ(ಕಒಇಉಕ) ಹಾಗೂ ಪ್ರಧಾನ ಮಂತ್ರಿಗಳ ವಿಶ್ವಕರ್ಮ ಕಾರ್ಯಕ್ರಮಗಳ ಸಂಬಂಧ ಜಿಲ್ಲಾಮಟ್ಟದ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯನ್ನು ಸದರಿ ವರ್ಷ (2025-26) 102 ಅರ್ಹ ನಿರುದ್ಯೋಗಿಗಳಿಗೆ ತಲುಪಿಸುವ ಗುರಿ ಹೊಂದಿದ್ದು ಈಗಾಗಲೇ 70 ಅರ್ಹ ಫಲಾನುಭವಿಗಳನ್ನು ಗುರುತಿಸಿ 4.08 ಕೋಟಿ ಅನುದಾನವನ್ನು ಅರ್ಹ ಫಲಾನುಭವಿಗಳಿಗೆ ಬ್ಯಾಂಕ್ ಮುಖಾಂತರ ಸಬ್ಸಿಡಿ ದರದಲ್ಲಿ ನೀಡಲಾಗಿದೆ ಎಂದರು.

ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯಡಿ ನಗರ ಪ್ರದೇಶದ ಸಾಮಾನ್ಯ ವರ್ಗದ ನಿರುದ್ಯೋಗಿಗಳು ಉದ್ಯಮ ಪ್ರಾರಂಭಿಸಲು ಶೇ 15 ಮತ್ತು ಪರಿಶಿಷ್ಟ ವರ್ಗದವರಿಗೆ ಶೇ 25 ರಷ್ಟು ಸಬ್ಸಿಡಿ ದರದಲ್ಲಿ ಸಾಲ ಸೌಲಭ್ಯವನ್ನು ನೀಡಲಾಗುತ್ತದೆ. ಗ್ರಾಮೀಣ ಪ್ರದೇಶದ ಸಾಮಾನ್ಯ ವರ್ಗದ ನಿರುದ್ಯೋಗಿಗಳು ಉದ್ಯಮ ಪ್ರಾರಂಭಿಸಲು ಶೇ 25 ಮತ್ತು ಪರಿಶಿಷ್ಟ ವರ್ಗದವರಿಗೆ ಶೇ 35 ರಷ್ಟು ಸಬ್ಸಿಡಿ ದರದಲ್ಲಿ ಬ್ಯಾಂಕ್ ಮೂಲಕ ಸಾಲ ಸೌಲಭ್ಯವನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ವಿವಿಧ ಯೋಜನೆಗಳ ಮೂಲಕ ಉದ್ಯಮ ಪ್ರಾರಂಭಿಸಲು ಇಚ್ಚೆ ಪಟ್ಟ ಅಭ್ಯರ್ಥಿಗಳ ಹಾಗೂ ಉದ್ಯಮ ಪ್ರಾರಂಭಿಸಲು ಇಚ್ಚಿಸು ಅಭ್ಯರ್ಥಿಗಳ ಪಟ್ಟಿ ಸಿದ್ಧ ಪಡಿಸಿ ಅವರಿಗೆ ಸದರಿ ಯೋಜನೆಯ ಬಳಕೆಯ ಕುರಿತು ವಿಶೇಷ ಕಾರ್ಯಗಾರ ಏರ್ಪಡಿಸಿ.

ಸದರಿ ಯೋಜನೆಯಲ್ಲಿ ಉತ್ಪಾದನಾ ಚಟುವಟಿಕೆ ಪ್ರಾರಂಭಿಸುವ ಅಭ್ಯರ್ಥಿಗಳಿಗೆ ಗರಿಷ್ಠ 50 ಲಕ್ಷ ಹಾಗೂ ಸೇವಾ ಚಟುವಟಿಕೆಯಲ್ಲಿ ಉದ್ಯಮ ಪ್ರಾರಂಭಿಸುವ ಅಭ್ಯರ್ಥಿಗಳಿಗೆ ಗರಿಷ್ಠ 20 ಲಕ್ಷದ ವರೆಗೂ ಸಾಲ ಸೌಲಭ್ಯವನ್ನು ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಲ್ಲಿ ಭಾಗಿಯಾಗಿರುವ ಮೂರು ಏಜೆನ್ಸಿ ಕಂಪನಿಗಳು ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸಿ. ಸದರಿ ವರ್ಷದ ಯೋಜನೆಯಲ್ಲಿ ಬಾಕಿ ಇರುವ ಅರ್ಜಿಗಳನ್ನು ಪೂರ್ಣಗೊಳಿಸಿ. ಕಳೆದು ಎರಡು ವರ್ಷಗಳ ಹಿಂದೆ ಸದರಿ ಯೋಜನೆಯಿಂದ ಸೌಲಭ್ಯ ಪಡೆದ ಅಭ್ಯರ್ಥಿಗಳ ಪಟ್ಟಿ ಸಿದ್ದಪಡಿಸಿ ಅವರು ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡು ಆರ್ಥಿಕವಾಗಿ ಪಾವಲಂಬಿಗಳಾಗಿದ್ದಾರೆ ಎಂಬುದರ ಕುರಿತು ಪರಿಶೀಲಿಸಿ ವರದಿ ಸಲ್ಲಿಸಿ ಎಂದು ಸೂಚಿಸಿದರು.

ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ: ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಯು ಮುಖ್ಯವಾಗಿ ಕೈ ಮತ್ತು ಉಪಕರಣಗಳೊಂದಿಗೆ ಕೆಲಸ ಮಾಡುವ 18 ಸಾಂಪ್ರದಾಯಿಕ ವ್ಯಾಪಾರಗಳಲ್ಲಿ ತೊಡಗಿರುವ ಕರಕುಶಲಕರ್ಮಿಗಳಿಗೆ ಬೆಂಬಲ ನೀಡುವುದಾಗಿದೆ. ನಿಜವಾಗಿಯೂ ಆರ್ಥಿಕವಾಗಿ ಹಿಂದುಳಿದ ಕರಕುಶಲ ಕರ್ಮಿಗಳಿಗೆ ಈ ಉಪಯುಕ್ತವಾಗಲಿದೆ. ಸದರಿ ಯೋಜನೆಯಡಿ ಈಗಾಗಲೇ ಜಿಲ್ಲೆಯಲ್ಲಿ 19 ಸಾವಿರಕ್ಕೂ ಹೆಚ್ಚು ಫಲಾನುಭವಿಗಳು ತರಬೇತಿ ಪಡೆದಿದ್ದು ಅದರಲ್ಲಿ 9600 ಜನರಿಗೆ ರೂ 15000 ಸಾವಿರ ಮೌಲ್ಯದ ಟೂಲ್ ಕಿಟ್ ವಿತರಣೆ ಮಾಡಲಾಗಿದೆ ಎಂದು ಹೇಳಿದರು.

ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಹೂ ಕಟ್ಟುವುದು. ಟೈಲರಿಂಗ್, ಬುಟ್ಟಿ ಹೆಣೆಯುವುದು ಸೇರಿದಂತೆ ವಿವಿಧ ಸಾಂಪ್ರದಾಯಿಕ ವ್ಯಾಪಾರಿಗಳಿಗೆ ಬೇಡಿಕೆ ಇದೆ. ಈ ಯೋಜನೆಯಲ್ಲಿ ಅರ್ಹ ಫಲಾನುಭವಿಗಳಿಗೆ 1 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತದೆ. ಸದರಿ ಯೋಜನೆ ಅಡಿ ಶಿಲ್ಪಿಗಳಿಗೂ ಹೆಚ್ಚಿನ ಉತ್ತೇಜನ ನೀಡಿ ಎಂದು ಹೇಳಿದರು.

ವಿವಿಧ ಯೋಜನೆಗಳ ಮೂಲಕ ಅರ್ಹ ಅಭ್ಯರ್ಥಿಗಳನ್ನು ನೋಂದಣಿ ಮಾಡುವುದು ಹಾಗೂ ತರಬೇತಿ ನೀಡುವುದು ಅಷ್ಟೇ ಅಲ್ಲ. ಬ್ಯಾಂಕುಗಳ ಮೂಲಕ ಸಾಲ ಸೌಲಭ್ಯವನ್ನು ಒದಗಿಸುವುದು ಮುಖ್ಯ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸಾಲ ಸೌಲಭ್ಯ ದೊರಕಿಸಿಕೊಟ್ಟರೆ ಅದರಿಂದ ಉದ್ಯಮವನ್ನು ಪ್ರಾರಂಭಿಸಿ ಆರ್ಥಿಕವಾಗಿ ಸದೃಢರಾಗುತ್ತಾರೆ ಎಂದು ಹೇಳಿದರು.

ಪಿಎಂ ವಿಶ್ವಕರ್ಮ ಯೋಜನೆಯಡಿ ಟೂಲ್ ಕಿಟ್ ಪಡೆದಿರುವ ಅಭ್ಯರ್ಥಿಗಳು ಸದರಿ ಟೂಲ್ ಕಿಟ್ ಗಳನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಅಥವಾ ಟೂಲ್ ಕಿಟ್ ಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬುದರ ಕುರಿತು ಪರಿಶೀಲನೆ ನಡೆಸಿ. ನಿಜವಾದ ಅರ್ಹರಿಗೆ ಸರ್ಕಾರಿ ಸೌಲಭ್ಯಗಳು ದೊರೆಯಬೇಕು. ಪಿಎಂ ವಿಶ್ವಕರ್ಮ ಯೋಜನೆಯ ಕುರಿತು ತಾಲೂಕು ಮಟ್ಟಗಳಲ್ಲಿ ವಿವಿಧ ಕಾರ್ಯಗಾರಗಳು ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸಿ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ. ದಿನೇಶ್. ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ ನಾಗನಂದ್, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಅರುಣ್ ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ವಾಹನದಟ್ಟಣೆ ಕುರಿತು ವರದಿ ಸಿದ್ಧಪಡಿಸಲು ಜಿಲ್ಲಾಧಿಕಾರಿ ಸೂಚನೆ

**ಮಂಡ್ಯ:** ನಗರದಲ್ಲಿ ಹೆಚ್ಚಿನ ವಾಹನದಟ್ಟಣೆ ಇರುವುದರಿಂದ ಮಂಡ್ಯ ದಕ್ಷಿಣ ಭಾಗಕ್ಕೆ ಬೈ ಪಾಸ್ ರಿಂಗ್ ರೋಡ್ ಪ್ರಸ್ತಾವನೆ ಇರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ವಾಹನ ದಟ್ಟಣೆಯ ಕುರಿತು ಅಧ್ಯಯನ ನಡೆಸಿ ವರದಿ ನೀಡಲು ಎಫ್.ಪಿ ಪ್ರಾಜೆಕ್ಟ್ ಮ್ಯಾನೇಜ್ಮೆಂಟ್ ಸಂಸ್ಥೆಗೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ರಾಷ್ಟ್ರೀಯ ಹೆದ್ದಾರಿ ರಿಂಗ್ ರೋಡ್ ಸಂಬಂಧ ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಎಫ್.ಪಿ ಪ್ರಾಜೆಕ್ಟ್ ಮ್ಯಾನೇಜ್ಮೆಂಟ್ ಸಂಸ್ಥೆಯವರು ನಗರದಲ್ಲಿ 5 ಕಡೆ ಸಿ.ಸಿ.ಟಿ.ವಿ ಅಳವಡಿಸಿ ಪ್ರತಿ ನಿತ್ಯ ನಗರದಲ್ಲಿ ಸಂಚರಿಸುವ ವಾಹನಗಳ ದಟ್ಟಣೆಯ ಕುರಿತು ಮಾಹಿತಿ ಮತ್ತು ಅಂಕಿಅಂಶಗಳನ್ನು ಸಂಗ್ರಹಿಸಿರುತ್ತಾರೆ ಎಂದು ತಿಳಿಸಿದರು.

ನಗರದಲ್ಲಿನ ವಾಹನ ದಟ್ಟಣೆಯನ್ನು ಕಡಿಮೆ ಮಾಡಲು ರಿಂಗ್ ರೋಡ್ ನಿರ್ಮಿಸುವ ಕುರಿತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸದರಿ ವಾಹನ ದಟ್ಟಣೆ ವರದಿಗೆ ಅನುಮೋದನೆ ದೊರೆತ ಕೂಡಲೇ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಸೂಚಿಸಿದರು.

ವಾಹನ ದಟ್ಟಣೆ ವರದಿ ಅನುಮೋದನೆಗೊಂಡ ನಂತರ ಡಿ.ಪಿ.ಆರ್ ಸಿದ್ಧಪಡಿಸಿ. ರಿಂಗ್ ರೋಡ್ ನಿರ್ಮಿಸಿದ ಪಕ್ಷದಲ್ಲಿ ಶೇಕಡ ಎಷ್ಟು ಪ್ರಮಾಣದಲ್ಲಿ ನಗರದ ಟ್ರಾಫಿಕ್ ಕಂಟ್ರೋಲ್ ಆಗಲಿದೆ ಹಾಗೂ ರಸ್ತೆಯ ಉದ್ದ ಅಗಲದ ಕುರಿತು ಮಾಹಿತಿ ಸಂಗ್ರಹ ಮಾಡಲು ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ಎಂದು ಹೇಳಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ, ಜಿಲ್ಲಾ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಕೃಷ್ಣ ಕುಮಾರ್, ಮಂಡ್ಯ ತಹಶೀಲ್ದಾರ್ ವಿಶ್ವನಾಥ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ನಾಳೆ ಲಯನ್ಸ್ ಪ್ರಾಂತೀಯ ಸಮ್ಮೇಳನ




ಮೈಸೂರು: ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ 317 ರ ಪ್ರಾಂತೀಯ ಸಮ್ಮೇಳನ ಜ. 4 ರಂದು ಬೆಳಗ್ಗೆ 8.30ಕ್ಕೆ ವಿದ್ಯಾರಣ್ಯಪುರಂ ಬಿಲ್ರ?ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಭಾಂಗಣದಲ್ಲಿ ನಡೆಯಲಿದೆ ಎಂದು ಪ್ರಾಂತೀಯ ಅಧ್ಯಕ್ಷ ಪಿ. ಹೊನ್ನರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಂಗಾಯಣದ ಮಾಜಿ ನಿರ್ದೇಶಕ ಡಾ.ಎಚ್. ಜನಾರ್ಧನ್ ಜನ್ನಿ ಮಾನವೀಯತೆ ಮೊದಲ ಆದ್ಯತೆ ವಿಷಯ ಕುರಿತು ಮಾತನಾಡುವರು, ಡಾ.ಎನ್. ಕೃಷ್ಣಗೌಡ ಅತಿಥಿಗಳಾಗಿರುವರು, ತಾವು ಅಧ್ಯಕ್ಷತೆ ವಹಿಸುವುದಾಗಿ ತಿಳಿಸಿದರು. ಈ ವೇಳೆ ಸುಮಾರು 1.75 ಲಕ್ಷ ಮೊತ್ತದಲ್ಲಿ 35 ಕೃತಕ ಕಾಲು ವಿತರಿಸಲಾಗುವುದು, ಸಂತೆ ಸರಗೂರಿನ ಶಾಲಾ ಕಟ್ಟಡ ಅಭಿವೃದ್ಧಿಗೆ 50 ಸಾವಿರ ರೂ.,ಗಳ ಚೆಕ್, ಓರ್ವ ಬಡ ಮಹಿಳೆಗೆ ಒಂದು ಹೊಲಿಗೆ ಯಂತ್ರ ವಿತರಿಸಲಾಗುವುದು. ಜೀವಮಾನ ಸಾಧನೆ ಪ್ರಶಸ್ತಿಗಳನ್ನು ಎಂ. ಪಂಚಲಿಂಗೇಗೌಡ, ವೀಣಾ ಅಶೋಕ್, ಎಚ್. ಖುಷಿ, ಕೆ.ಪಿ. ಶಿವಪ್ರಸಾದ್ ಹಾಗೂ ಲಯನ್ ಜೈಪ್ರಕಾಶ್ ಅವರಿಗೆ ಪ್ರದಾನ ಮಾಡಲಾಗುವುದೆಂದರು.

ಎಂ.ಎನ್. ಜೈಪ್ರಕಾಶ್, ಎಂ.ವಿ. ನಂದೀಶ್, ಸಿ. ಶಂಕರ್ ಹಾಗೂ ಇನ್ನಿತರರು ಇದ್ದರು

# ಜ.4ರಂದು ಸಂಕ್ರಾಂತಿ ಸಂಭ್ರಮೋತ್ಸವ



**ಮಂಡ್ಯ:** ದಾರಿದೀಪ ಫೌಂಡೇಷನ್ ವತಿಯಿಂದ ಸಂಕ್ರಾಂತಿ ಸಂಭ್ರಮೋತ್ಸವ ಕಾರ್ಯಕ್ರಮವನ್ನು ಜ.4ರಂದು ಬೆಳಿಗ್ಗೆ 9.30ಕ್ಕೆ ಮದ್ದೂರಿನ ಎಸ್.ವೈ.ಎಸ್. ಕನ್ವೆನ್ಷನ್ ಹಾಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಫೌಂಡೇಷನ್‌ನ ಖಜಾಂಚಿ ಜಿ.ಎಸ್.ಪ್ರದೀಪ್‌ಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಕ್ರಾಂತಿ ಹಬ್ಬದ ಪ್ರಯುಕ್ತ ನಡೆಯಲಿರುವ ಕಾರ್ಯಕ್ರಮದಲ್ಲಿ ಹಬ್ಬದ ವೈಭವದ ಮೆರುಗನ್ನು ನೀಡುವಂತೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಅಂದು ಬೆಳಿಗ್ಗೆ 9.30ಕ್ಕೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. 10.30ರಿಂದ 1.30ರವರೆಗೆ ಜಾನಪದ ಕಲೋತ್ಸವ, 2ರಿಂದ 3.30ರವರೆಗೆ ಪ್ರಶಸ್ತಿ ಪ್ರಧಾನ, ಸಮಾರೋಪ ಸಮಾರಂಭದ ನಂತರ ವಂದನಾರ್ಪಣೆ ಮಾಡಲಾಗುವುದು ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಡಾ.ಪಿ.ವೀರಭದ್ರಪ್ಪ, ಮಹೇಶ್ ಚಂದ್ರಗುರು, ದೋ.ಚಿ.ಗೌಡ, ಶಂಕರೇಗೌಡ, ಪೈ.ಅಬ್ದುಲ್ ರಫೀಕ್ (ಜೋಬಾ ರಫೀಕ್) ಪಿಎಸ್. ಮಂಜುನಾಥ್, ಎಂ.ನಂದೀಶ್, ಡಾ.ಆರ್.ರಾಘವೇಂದ್ರ, ಕೃಷ್ಣಮೂರ್ತಿ, ಮಲ್ಲುಸ್ವಾಮಿ, ನಟರಾಜು, ಸವಿತ ಚಿರು ಕುನ್ನಯ್ಯ, ಸಿ.ಟಿ.ರಾಜೇಂದ್ರ, ಕೆ.ಪಿ.ಅರುಣಕುಮಾರಿ, ಚಲುವರಾಜು, ಪಿ.ವಿ.ಮಹದೇವು, ಮಂಜುನಾಥ್, ಡಿ.ಎಸ್.ಭಾರ್ಗವಿ, ಡಿ.ಎಂ.ಮಹೇಶ್ ಅವರುಗಳಿಗೆ ದಾರಿದೀಪ ರತ್ನ ಪ್ರಶಸ್ತಿ ನೀಡಲಾಗುವುದು ಎಂದು ಹೇಳಿದರು.

ಗೋಷ್ಠಿಯಲ್ಲಿ ಫೌಂಡೇಷನ್ ಅಧ್ಯಕ್ಷ ಎಲ್. ದಯಾನಂದ, ಕಾರ್ಯದರ್ಶಿ ಎಂ.ನಳಿನಿ, ಜಂಟಿ ಕಾರ್ಯದರ್ಶಿ ಧರ್ಮೇಂದ್ರ ಸಿಂಗ್ ಇದ್ದರು.

# 'ಯುವಕರ ಭಾವನೆಗಳೊಂದಿಗೆ ರಾಜಕೀಯ ಚೆಲ್ಲಾಟವಾಡುತ್ತಿವೆ ಜೆಡಿಎಸ್-ಕಾಂಗ್ರೆಸ್ ಪಕ್ಷಗಳು'




ಮಂಡ್ಯ: ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸುವ ವಿಚಾರದಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳು ಜಿಲ್ಲೆಯ ಜನರ ಹಾಗೂ ಯುವಕರ ಭಾವನೆಗಳೊಂದಿಗೆ ರಾಜಕೀಯ ಚೆಲ್ಲಾಟವಾಡುತ್ತಿವೆ ಎಂದು ಭಾರತೀಯ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಜಿಲ್ಲಾ ಕಾರ್ಯದರ್ಶಿ ಟಿ.ಎಲ್.ಕೃಷ್ಣೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಕೈಗಾರಿಕೆ ಸ್ಥಾಪನೆ ಸಂಬಂಧ ಆಡಿರುವುದು ರಾಜಕೀಯ ಪ್ರೇರಿತ ಮಾತುಗಳು. ಜಿಲ್ಲೆಯ ಜನರನ್ನು ಮಂಗ ಮಾಡಲು ರಾಜ್ಯ ಸರಕಾರ ಜಾಗ ಕೊಡುತ್ತಿಲ್ಲ ಎಂದು ಆರೋಪ ಮಾಡುತ್ತಿದ್ದಾರೆ ಎಂದರು.

ಜಿಲ್ಲೆಯಲ್ಲಿ ಅತಿ ಹೆಚ್ಚು ಉದ್ಯೋಗ ಸೃಷ್ಟಿಸುವ, ಆಧುನಿಕ ಮತ್ತು ಉನ್ನತ ತಂತ್ರಜ್ಞಾನ ತರುವ ಕೈಗಾರಿಕೆಗಳನ್ನು ಸಾರ್ವಜನಿಕ ವಲಯದಲ್ಲಿ ಸ್ಥಾಪಿಸಬೇಕಿದೆ. ಆದರೆ ರಾಜಕೀಯ ಪಕ್ಷಗಳು ಈ ವಿಚಾರ ರಾಜಕಾರಣ ಮಾಡುತ್ತಿವೆ. ಇವರ ಕೆಸರೆರೆಚಾಟ ನೋಡುತ್ತಿದ್ದರೆ, ಎರಡೂ ಪಕ್ಷಗಳಿಗೆ ಕೈಗಾರಿಕೆ ಸ್ಥಾಪಿಸುವ ಇಚ್ಛಾಸಕ್ತಿ ಇಲ್ಲದಂತೆ ಕಾಣುತ್ತಿದೆ ಎಂದು ಅಭಿಪ್ರಾಯ ಪಟ್ಟರು.

ಕೈಗಾರಿಕೆ ಸ್ಥಾಪನೆ ಸಂಬಂಧ ಕೇಂದ್ರ ಸಚಿವರು ರಾಜ್ಯ ಸರಕಾರಕ್ಕೆ ನಿರ್ದಿಷ್ಟ ಪ್ರಸ್ತಾವನೆ ಸಲ್ಲಿಸಿಲ್ಲ. ಕೈಗಾರಿಕೆ ಸ್ಥಾಪಿಸುವ ಸಂಸ್ಥೆ, ಉತ್ಪಾದನೆಯ ಮಾಹಿತಿ, ಬಂಡವಾಳದ ಮೂಲ, ಎಷ್ಟು ಉದ್ಯೋಗ ಸೃಷ್ಟಿಯಾಗಲಿದೆ, ಭೂಮಿಯ ಅಗತ್ಯತೆ, ಕೆಐಎಡಿಬಿ ನಿವೇಶನಗಳಲ್ಲಿ ಕೈಗಾರಿಕೆ ತೆರೆಯುವುದ ಅಥವಾ ಹೊಸದಾಗಿ ಭೂಮಿ ಬೇಕ, ಸಂಸ್ಥೆ ಹಾಗೂ ಕೇಂದ್ರ ಸರಕಾರದ ನಡುವೆಯ ಮಾತುಕತೆ, ಒಪ್ಪಂದಗಳೇನಿವೆ, ರಾಜ್ಯ ಸರಕಾರಕ್ಕೆ ಸಂಸ್ಥೆಯು ನೀಲಿ ನಕ್ಷೆ ಅಥವಾ ನಿರ್ದಿಷ್ಟ ಪ್ರಸ್ತಾವನೆ ಸಲ್ಲಿಸಿದೆಯೇ ಎಂಬ ಮಾಹಿತಿಯನ್ನು ಜಿಲ್ಲೆ ಜನರ ಮುಂದಿಡುವಂತೆ ಒತ್ತಾಯಿಸಿದರು.

ಇತ್ತ ರಾಜ್ಯ ಸರಕಾರವೂ ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ಅತ್ತ ಕೇಂದ್ರ ಸರಕಾರವು ಮನರೇಗಾದಲ್ಲಿ ಉದ್ಯೋಗದ ಗ್ಯಾರೆಂಟಿ ಕಸಿದಿದೆ. ಇದನ್ನು ಪ್ರಶ್ನಿಸದ ಕೇಂದ್ರ ಸಚಿವರು ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸಿ ಜಿಲ್ಲೆಯ ಯುವಕರಿಗೆ ಉದ್ಯೋಗ ಒದಗಿಸ ಮುಂದಾಗುವರೆ ಎಂದು ಪ್ರಶ್ನಿಸಿದರು.

ಈ ನಡುವೆ ಕೇಂದ್ರ ಸರಕಾರವು ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಣ ಮಾಡಲು ಯತ್ನಿಸುತ್ತಿದೆ. ಪ್ರತಿ ವಿದ್ಯುತ್ ಬಸ್‌ಗೆ 50 ಲಕ್ಷ ಸಬ್ಸಿಡಿ ಆಧಾರದಲ್ಲಿ 4000 ಬಸ್‌ಗೆ 2000 ಕೋಟಿ ರೂಗಳನ್ನು ಕುಮಾರಸ್ವಾಮಿ ಅವರ ಇಲಾಖೆಯ ಅಡಿಯಲ್ಲಿಯೇ ನೀಡಲಾಗುತ್ತಿದೆ. ಖಾಸಗಿ ಸಂಸ್ಥೆಗಳೇ ತಯಾರಿಸಿ, ಸಾರಿಗೆ ವ್ಯವಸ್ಥೆ ನಡೆಸುವ ಮೂಲಕ ಖಾಸಗೀಕರಣ ಮಾಡುವ ಹುನ್ನಾರ ಹೆಣೆಯಲಾಗಿದೆ ಎಂದು ಆರೋಪಿಸಿದರು. ಗೋಷ್ಠಿಯಲ್ಲಿ ಕಾರ್ಯದರ್ಶಿ ಎನ್.ಎಲ್.ಭರತ್‌ರಾಜ್, ಮಂಡಳಿ ಸದಸ್ಯ ಬಿ.ಹನುಮೇಶ್, ಜಿಲ್ಲಾ ಸಮಿತಿ ಸದಸ್ಯ ಚಂದ್ರಶೇಖರ್ ಇದ್ದರು.

# ವಿಜಯಲಕ್ಷ್ಮಿಗೆ ಅಶ್ಲೀಲ ಕಮೆಂಟ್: ಟೆಕ್ಕಿ ಮತ್ತು ಆಟೋ ಡ್ರೈವರ್ ಬಂಧನ

**ಬೆಂಗಳೂರು:** ನಟ ದರ್ಶನ್ ತೂಗುದೀಪ ಪತ್ನಿ ವಿಜಯಲಕ್ಷ್ಮಿ ವಿರುದ್ಧ ಅಶ್ಲೀಲ ಮತ್ತು ಅವಹೇಳನಕಾರಿ ಪೋಸ್ಟ್ ಮಾಡಿದ ಆರೋಪದ ಮೇಲೆ ಬೆಂಗಳೂರು ಪೊಲೀಸರು ಸಾಫ್ಟ್‌ವೇರ್ ಎಂಜಿನಿಯರ್ ಮತ್ತು ಆಟೋರಿಕ್ಷಾ ಚಾಲಕನನ್ನು ಬಂಧಿಸಿದ್ದಾರೆ.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಸದ್ಯ ಜೈಲಿನಲ್ಲಿದ್ದಾರೆ. ಬೆಂಗಳೂರಿನ ಚಿಕ್ಕಬಾಣಾವರ ನಿವಾಸಿ ಆಟೋರಿಕ್ಷಾ ಚಾಲಕ ಚಂದ್ರಶೇಖರ್ ಬಿ (45) ಮತ್ತು ದಾವಣಗೆರೆಯ ಸಾಫ್ಟ್‌ವೇರ್ ಎಂಜಿನಿಯರ್ ನಿತಿನ್ (31) ಬಂಧಿತ ಆರೋಪಿಗಳು ಡಿಸೆಂಬರ್ 24 ರಂದು ವಿಜಯಲಕ್ಷ್ಮಿ ಅವರು ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಲವು ವ್ಯಕ್ತಿಗಳು ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಮತ್ತು ಅವರ ಕುಟುಂಬದ ವಿರುದ್ಧ ಕೀಳು ಮಟ್ಟದ ಅಶ್ಲೀಲ, ಅವಹೇಳನಕಾರಿ ಪೋಸ್ಟ್‌ಗಳು,

ಕಾಮೆಂಟ್‌ಗಳು ಮತ್ತು ಸಂದೇಶಗಳನ್ನು ಪೋಸ್ಟ್ ಮಾಡುತ್ತಿದ್ದಾರೆ ಎಂದು ವಿಜಯಲಕ್ಷ್ಮಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

# 'ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷರು ಪೂರ್ಣಗೊಳಿಸಿಲ್ಲ'




**ಮಂಡ್ಯ:** ಜಿಲ್ಲಾ ಕುರುಬರ ಸಂಘದ ಚುಣಾವಣೆ ಸಂಬಂಧ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ತೀರ್ಮಾನವನ್ನು ಕಾರ್ಯಕಾರಿ ಮಂಡಳಿಯು ಲಿಖಿತ ರೂಪದಲ್ಲಿ ನೀಡುವಂತೆ ಸಂಘದ ಸದಸ್ಯ ಹಾಗೂ ಮಾಜಿ ಸೈನಿಕ ಸಿ.ಟಿ.ಬೀರೇಶ್ ಒತ್ತಾಯಿಸಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ವಾರ್ಷಿಕ ಸಭೆಗೂ ಮುನ್ನ ಹಾಲಿ ಕಾರ್ಯಕಾರಿ ಮಂಡಳಿ ಮುಂದುವರೆಯುವ ಸಂಬಂಧ ಆಕ್ಷೇಪ ವ್ಯಕ್ತಪಡಿಸಿ ಪತ್ರ ಬರೆಯಲಾಗಿತ್ತು. ಆ ಪತ್ರಕ್ಕೆ ಇನ್ನೂ ಉತ್ತರ ನೀಡಿಲ್ಲ ಎಂದರು.

ಭಾನುವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷರು ಪೂರ್ಣಗೊಳಿಸಿಲ್ಲ. ಅವರು ಪ್ರಸ್ತಾಪಿಸಿದ ವಿಷಯಕ್ಕೆ ಕೋರಂ ಅನ್ನೂ ಪಡೆಯಲಿಲ್ಲ. ಸಭೆಯಲ್ಲಿ ಅಧ್ಯಕ್ಷೀಯ ಭಾಷಣ, ತೀರ್ಮಾನಗಳನ್ನು ಘೋಷಣೆ ಮಾಡದೇ ಸಭೆಯನ್ನು ಮುಟುಕುಗೊಳಿಸಿದ್ದಾರೆ ಎಂದು ಆರೋಪಿಸಿದರು.

ಎಲ್ಲ ಸಂಘಗಳು ಸದಸ್ಯತ್ವ ಹೆಚ್ಚಿಸಲು ಶ್ರಮಿಸಿದರೆ ಸದಸ್ಯರ ಸಂಖ್ಯೆ ಹೆಚ್ಚಾದರೆ ಸಂಘಕ್ಕೆ ಹೊರೆಯಾಗುತ್ತದೆ ಎಂದು ಹೇಳಿದವರಲ್ಲಿ ಇವರೇ ಮೊದಲ ಅಧ್ಯಕ್ಷ. ನಾನು ಹಳ್ಳಿಗಳು ತಿರುಗಿ 300ಕ್ಕೂ ಹೆಚ್ಚು ಸದಸ್ಯತ್ವ ಮಾಡಿಸಿದ್ದೇನೆ. ಸಂಘದಲ್ಲಿ ನಿರ್ದೇಶಕನಾಗಿ, ಅಧ್ಯಕ್ಷನಾಗಿ ಆಯ್ಕೆಯಾಗುವ ಆಸೆ ನನಗೂ ಇದೆ. ಸಹಕಾರ ನಿಯಮದಡಿ ಅವಧಿ ಮುಗಿಯುವುದರ ಒಳಗೆ ಚುನಾವಣೆ ನಡೆಸಲು ಮುಂದಾಗಬೇಕು ಎಂದು ಆಗ್ರಹಿಸಿದರು.

ಇವರು ಇದುವರೆಗೂ ಯಾವುದೇ ಚುನಾವಣೆ ಎದುರಿಸಿ ಆಯ್ಕೆಯಾಗಿಲ್ಲ. ಅವಿರೋಧ ಆಯ್ಕೆ ಮೂಲಕ ಅಧ್ಯಕ್ಷರಾಗಿದ್ದಾರೆ. ಇವರಿಗೆ ಮುಂದೆ ಚುನಾವಣೆ ನಡೆಯಲಿದೆ ಎಂಬ ಭಯವಿದೆ. ಚುನಾವಣೆ ಎದುರಿಸಿದರೆ ಇವರಿಗೆ ಠೇವಣಿಯೂ ದೊರೆಯುವುದಿಲ್ಲ.

ಅದಕ್ಕೆ ಹಿಂಬಾಗಿಲಿನಿಂದ ಅಧಿಕಾರದಲ್ಲಿ ಮುಂದುವರೆಯುವ ಕೆಲಸಕ್ಕೆ ಮುಂದಾಗಿದ್ದಾರೆ. ಅವರು ಸಂಘದ ಅಭಿವೃದ್ಧಿ ಮಾಡುವುದೇ ಆದರೆ ಚುನಾವಣೆ ಗೆದ್ದು ಬಂದು ಮಾಡಲಿ ಎಂದು ಸವಾಲು ಹಾಕಿದರು.

ಗೋಷ್ಠಿಯಲ್ಲಿ ಎಸ್.ಎಲ್.ಶಂಕರ್, ಲೋಕೇಶ್, ಬೀರೇಶ್, ಎಂ.ಭೀಮೇಶ್, ಎಸ್.ಸಿ.ಸ್ವಾಮಿ ಇದ್ದರು.

# ಐದು ತಿಂಗಳ ಮಗುವಿನ ಜೀವತೆಗೆದ ಹನಿ ನೀರು: ವಿವಾಹವಾಗಿ 10 ವರ್ಷದ ನಂತರ ಜನಿಸಿದ್ದ ಕಂದಮ್ಮ!

**ಭೋಪಾಲ್:** ಮಗುವಿಗೆ ಕುಡಿಸುವ ಹಾಲಿಗೆ ಬೆರೆಸಿದ್ದ ನಲ್ಲಿ ನೀರು ಮಗುವಿನ ಜೀವವನ್ನೇ ತೆಗೆದಿರುವ ಘಟನೆ ಇಂದೋರ್‌ನಲ್ಲಿ ನಡೆದಿದೆ. ಕಲುಷಿತ ನೀರು ಸೇವಿಸಿ ಐದೂವರೆ ತಿಂಗಳ ಅಯಾನ್ ಎಂಬ ಮಗು ಸಹ ಸಾವನ್ನಪ್ಪಿದೆ.

ಅವ್ಯಾನ್ ಅವರ ತಂದೆ ಸುನಿಲ್ ಸಾಹು ಖಾಸಗಿ ಕೊರಿಯರ್ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ವರ್ಷಗಳ ಪ್ರಾರ್ಥನೆ ಮತ್ತು ಕಾಯುವಿಕೆಯ ನಂತರ ಅವರಿಗೆ ಜುಲೈನಲ್ಲಿ ಮಗು ಜನಿಸಿತ್ತು.

10 ವರ್ಷಗಳ ನಂತರ ದೇವರು ನಮಗೆ ಖುಷಿ ನೀಡಿದ್ದನು. ಬಳಿಕ, ದೇವರೇ ಅದನ್ನು ಕಸಿದಿದ್ದಾನೆ ಎಂದು ಇಂದೋರ್‌ನ ಮನೆಯ ಮೂಲೆಯೊಂದರಲ್ಲಿ ಕುಳಿತಿದ್ದ ವೃದ್ಧೆಯೊಬ್ಬರು ನೋವಿನಿಂದ ಹೇಳುತ್ತಿದ್ದರು.

ನೋವು ತೋಡಿಕೊಂಡ ವೃದ್ಧೆಯ ಮಗನಿಗೆ ಮದುವೆಯಾಗಿ 10 ವರ್ಷಗಳ ಕಾಲ ಮಕ್ಕಳಿರಲಿಲ್ಲ. ಇತ್ತೀಚೆಗೆ ಅವರ ಸೊಸೆ ಗಂಡು ಮಗುವಿಗೆ ಜನ್ಮ ನೀಡಿದ್ದರು. ಅದಕ್ಕೆ ಅವ್ಯಾನ್ ಎಂದು ಹೆಸರಿಟ್ಟಿದ್ದರು. ತಾಯಿಯಿಂದ ಎದೆಹಾಲು ಬರದ ಕಾರಣ ಪ್ಯಾಕೆಟ್ ಹಾಲನ್ನು ಕೊಡಲು ವೈದ್ಯರು ಸಲಹೆ ನೀಡಿದ್ದರು. ಅದರಂತೆ, ಗಟ್ಟಿ ಹಾಲಿಗೆ ತಾವು ಸದಾ ಬಳಸುತ್ತಿದ್ದ ನಲ್ಲಿ ನೀರನ್ನೇ ಬೆರೆಸಿ ಮಗುವಿಗೆ ನೀಡಿದ್ದರು. ದುರಾದೃಷ್ಟವಶಾತ್, ಕಲುಷಿತಗೊಂಡಿದ್ದ ನೀರು ವಿಷವಾಗಿ ಪರಿಣಮಿಸಿದ್ದು, ಮಗು ಮೃತಪಟ್ಟಿದೆ.

ಮಗು ಆರೋಗ್ಯವಾಗಿತ್ತು. ಯಾವುದೇ ಸಮಸ್ಯೆ ಇರಲಿಲ್ಲ. ಎರಡು ದಿನಗಳ ಹಿಂದೆ ಅಯಾನ್‌ಗೆ ಜ್ವರ, ಭೇದಿ ಕಾಣಿಸಿಕೊಂಡಿತು. ಬಳಿಕ, ಅವನನ್ನು ಆಸ್ಪತ್ರೆಗೆ ಕರೆದೊಯ್ದೆವು. ವೈದ್ಯರು ಔಷಧ ನೀಡಿದ್ದರು. ಆದರೂ ಪರಿಸ್ಥಿತಿ ಸುಧಾರಿಸಿರಲಿಲ್ಲ. ಭಾನುವಾರ ರಾತ್ರಿ ಮಗುವಿನ ಸ್ಥಿತಿ ಗಂಭೀರವಾಯಿತು. ಸೋಮವಾರ ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟಿತು ಎಂದು ಹೇಳಿದ್ದಾರೆ.

ಕಲುಷಿತ ನೀರಿನಿಂದಲೇ ಮಗು ಮೃತಪಟ್ಟಿದೆ ಎಂದಿರುವ ಸುನಿಲ್, ನೀರು ಕಲುಷಿತಗೊಂಡಿದೆ ಎಂದು ಯಾರೊಬ್ಬರೂ ನಮಗೆ ತಿಳಿಸಲಿಲ್ಲ. ನೆರೆಹೊರೆಯವರೂ ಇದೇ ನೀರು ಬಳಸುತ್ತಿದ್ದು, ಯಾವುದೇ ಎಚ್ಚರಿಕೆ ನೀಡಿಲ್ಲ ಎಂದು ಆಕ್ರೋಶ ಹೊರಹಾಕಿದ್ದಾರೆ.


# ಕರುಳ ಬಳ್ಳಿಗಳಿಗಿಂದು ಕೊಂಚ ಸಮಯ ನೀಡಬೇಕಿದೆ...



ಒಂದು ಸುಂದರವಾದ ಮನೆ ಸಿದ್ಧಗೊಳ್ಳಬೇಕೆಂದರೆ ಅದಕ್ಕೆ ಮುಖ್ಯವಾಗಿ ಅದರ ಸುಭದ್ರವಾದ ಅಡಿಪಾಯವು ಪ್ರಮುಖ ಪಾತ್ರವಹಿಸುತ್ತದೆ. ಅಂತಹ ಅಡಿಪಾಯ ಸಿಕ್ಕಾಗ ಮಾತ್ರ ಮನೆಯು ಒಳ್ಳೆಯ ರೀತಿಯಲ್ಲಿ ಆಕರ್ಷಣೀಯವಾಗಿ ಸಿದ್ಧಗೊಳ್ಳುತ್ತದೆ.

ಅದರಂತೆ ನಮ್ಮ ಸಮಾಜದ ಬೆಳವಣಿಗೆಗೆ ಒಳ್ಳೆಯ ವಿದ್ಯಾವಂತ ಯುವಕರ ಅಗತ್ಯವಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಅಂತಹ ಯುವಕರ ಕೊರತೆ ಕಾಣುತ್ತೇವೆ. ಏಕೆಂದರೆ ಇತ್ತೀಚೆಗೆ ವಿದ್ಯಾರ್ಥಿಗಳನ್ನು ಗಮನಿಸಿದರೆ ಅವರಿಗೆ ಅಂತಹ ಸಾಮಾನ್ಯ ಜ್ಞಾನದ ಕೊರತೆ ಕಂಡುಬರುತ್ತದೆ. ಕೇವಲ ಹತ್ತನೇ ತರಗತಿಗೆ ಬಂದಾಗ, ಇಲ್ಲವೇ ದ್ವಿತೀಯ ಪಿಯುಸಿ ಬಂದಾಗ, ಕೇವಲ ಅಂಕಗಳಿಕೆಗೆ ಮಾತ್ರ ತಮ್ಮನ್ನು ತಾವು ಸಿದ್ಧಗೊಳಿಸಿಕೊಳ್ಳುವುದು ಸರಿಯೇ ಎನ್ನುವುದು ಯಕ್ಷ ಪ್ರಶ್ನೆ ಆಗಿದೆ.ಆ ಮನಸುಗಳು ಇತ್ತೀಚೆಗೆ ವಿಷಯದ ಮೂಲ ಅರಿಯದೆ ಕೇವಲ ಸಾಂದರ್ಭಿಕವಾಗಿ ವಿಷಯಂಶಗಳನ್ನು ಕಂಠ ಪಾಠ ಮಾಡುವುದು ಕಂಡುಬರುತ್ತದೆ.

ಇದಕ್ಕೆಲ್ಲ ಮೂಲ ಕಾರಣ ಯಾರು? ಎಂದು ನೋಡಿದಾಗ, ಮನೆಯೇ ಮೊದಲ ಪಾಠ ಶಾಲೆ ಎಂಬಂತೆ ಮನೆಯಲ್ಲಿನ ವಾತಾವರಣ ಹಾಗೂ ಮಕ್ಕಳಿಗೆ ಸಮಯಪಾಲನೆ ಇಲ್ಲದಿರುವುದು ಕಾಣುತ್ತೇವೆ.ಮಗುವಿನಲ್ಲಿ ಪ್ರಶ್ನೆ ಹುಟ್ಟದಿದ್ದರೆ ಆ ಮಗು ಕಲಿಯುವುದಾದರು ಏನು? ಪ್ರಶ್ನೆ ಹುಟ್ಟಿದಾಗಲೇ ಅಲ್ಲವೇ ಉತ್ತರ ಹುಡುಕುವ ಕಾರ್ಯ ಆರಂಭವಾಗುತ್ತದೆ. ಆದರೆ ಅದು ಅವರಲ್ಲಿ ಕಾಣದಾಗಿದೆ ಎಂದರೆ ಅವರು ಕೇವಲ ಶಿಕ್ಷಕರೋ ಇಲ್ಲ ಪರೀಕ್ಷೆಯ ಭಯಕ್ಕೊ ಇಲ್ಲ ಮನೆಯವರ ಒತ್ತಡಕ್ಕೋ ಓದುವ ಸಂದರ್ಭ ತಾವೇ ಸೃಷ್ಟಿ ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಮನೆಯಲ್ಲಿ ಹಿರಿಯರು ಮೊಬೈಲ್, ಟಿವಿ ನೀಡುವುದರಿಂದ,ಅದರ ನಿರಂತರ ವೀಕ್ಷಣೆಯಿಂದ ಅವರ ಮಾನಸಿಕ ಮಟ್ಟ ಹಾಗೂ ಆಲೋಚನಾ ಶಕ್ತಿ ಕುಗ್ಗುತ್ತಿದೆ. ಅವರು ಕೇವಲ ಏಕಮುಖ ವೀಕ್ಷಣೆಯಿಂದಾಗಿ ಮನೆಯವರೆಲ್ಲರೂ ಎಲ್ಲಿ ನೋಡಿ ಏನಾದರೂ ಹೇಳುವರೋ ಎನ್ನುವ ಕಾರಣ ತಲೆ ಅಲ್ಲಾಡಿಸುವ ಕ್ರಮಕ್ಕೆ ಜಾರಿ ಹೋಗುತ್ತಿದ್ದಾರೆ. ಇದು ಕ್ರಮೇಣ ಬೆಳೆಯುತ್ತಾ ಬೆಳೆಯುತ್ತಾ, ಶಾಲಾ ಅವಧಿಯಲ್ಲಿಯೂ ಪ್ರಶ್ನೆ ಕೇಳಿದಾಗಲೆಲ್ಲ ಬಾಯಿ ಬಿಟ್ಟು ಉತ್ತರಿಸುವಷ್ಟು ಸಬಲರಾಗಿರದ ಮಕ್ಕಳು ಕೇವಲ ತಲೆ ಅಲ್ಲಾಡಿಸುವ ಗುಣವನ್ನ ಬೆಳೆಸಿಕೊಂಡು ತಮ್ಮ ಆಲೋಚನಾ ಶಕ್ತಿಯನ್ನು ಕಳೆದುಕೊಂಡು ಯಾವುದೇ ಅಡಿಪಾಯವಿಲ್ಲದೆ ಕಲಿಯಲು ಆರಂಭಿಸುತ್ತಾರೆ.



ಇದನ್ನು ತಪ್ಪಿಸಬೇಕಿದೆ ಆದ್ದರಿಂದ ಪಾಲಕರಾದ ನಾವುಗಳು ಮನೆಯಲ್ಲಿ ನಿಗದಿತ ಸಮಯ ಮಾಡಿಕೊಂಡು ಮಗುವಿಗೆ ಪ್ರತಿದಿನವೂ ಓದಿನ ಬಗ್ಗೆ ಪ್ರೋತ್ಸಾಹದಾಯಕ ವಾತಾವರಣ ಸೃಷ್ಟಿ ಮಾಡುವುದು ಮಗುವಿಗೆ ಹೊಸ ಚೈತನ್ಯ ಹೊಸ ಹುರುಪು ನೀಡಿ ಅವರ ಮಾನಸಿಕ ಮಟ್ಟ ವೃದ್ಧಿಯಾಗಲು ಮನೆಯವರು ಒಂದೊಳ್ಳೆ ವಾತಾವರಣ ಸೃಷ್ಟಿ ಮಾಡುವಲ್ಲಿ ಕಾರ್ಯೋನ್ಮುಖರಾಗಬೇಕಿದೆ. ಮಗುವಿನ ಸರ್ವತೋಮುಖ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕಿದೆ.ಅದು ಆದಲ್ಲಿ ಸಮಾಜದ ಏಳಿಗೆಗೆ ಇದೊಂದು ಪ್ರಮುಖ ಅಸ್ತ್ರವಾಗುವುದು ಎನ್ನುವುದು ನನ್ನನಿಸಿಕೆ..

**ಆನಂದ ಜಿ.ಎನ್.**
**ದಾಂಡೇಲಿ.(ಉ.ಕ.)**

# ಜೀವಕ್ಕೆ ತಂಪು ಜುಟ್ಟಿಗೆ ಭದ್ರ: ತಂಗಡಿ



ಕಾಡುಗಳಲ್ಲಿ, ಬೆಟ್ಟಗುಡ್ಡ ಪ್ರದೇಶಗಳಲ್ಲಿ, ಪಾಳು ಭೂಮಿ, ರಸ್ತೆಗಳ ಪಕ್ಕ ಎಲ್ಲೆಂದರಲ್ಲಿ ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಯಥೇಚ್ಚವಾಗಿ ಕಾಣ ಸಿಗುವ ಗಿಡವೆಂದರೆ ತಂಗಡಿ. ಈ ಗಿಡವು 3 ರಿಂದ 6 ಅಡಿ ಎತ್ತರವಾಗಿ ಪೊದೆಯಂತೆ ಬೆಳೆದುಕೊಂಡಿರುತ್ತದೆ. ಸುಂದರವಾದ ಹಳದಿ ಹೂವು ಹೊಂದಿರುವ ಈ ಗಿಡವನ್ನು

ಆವರ್ತಿಕಿ,ಆವರಿಕೆ, ತಂಗಡಿಗಿಡ, ಹೊನ್ನಂಬರಿ, ತಂಗಡಿಚೆಟ್ಟು, ಆವರಮ್ ಪೂ, ಚರ್ಮರಂಗ, ಮಾಯಹರಿ, ಆವರ್ತಿಕಾ ಎಂಬಾ ಹೆಸರುಗಳಿಂದ ಕರೆಯುತ್ತಾರೆ.

ಅಪಾರ ಔಷಧೀಯ ಗುಣಗಳುಳ್ಳ ಗಣಿ ತಂಗಡಿಯಲ್ಲಿ, ತಂಗಡಿ, ನೆಲತಂಗಡಿ, ಮರತಂಗಡಿ, ಸೀಮೆತಂಗಡಿ, ಕಾಡು ತಂಗಡಿ ಎಂಬ ಹತ್ತಾರು ಪ್ರಭೇದಗಳಿದ್ದುರು, ಅವುಗಳಲ್ಲೂ ಔಷಧೀಯ ಗುಣಗಳಿದ್ದರು, ಔಷಧೀಯವಾಗಿ ಉಪಯೋಗಿಸುವುದು ಈ ಕೆಳಗಿನ ಚಿತ್ರದಲ್ಲಿರುವ ತಂಗಡಿ ಗಿಡವನ್ನೆ. ತಂಗಡಿ ಎಲ್ಲೆಂದರಲ್ಲಿ ಬೆಳೆಯುವ ಗಿಡವೆಂದು ಜನರಲ್ಲಿ ತಾತ್ಸಾರ ಮನೋಭಾವ ಇದ್ದರೂ, ತಂಗಡಿ ಅಪಾರ ಪ್ರಮಾಣದ ಔಷಧೀಯ ಗುಣಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡಿದೆ. ಅನೇಕ ಔಷಧೀಯ ಗುಣ ಹೊಂದಿರುವ ಈ ಗಿಡದ ಪ್ರತಿಯೊಂದು ಭಾಗವೂ ಉಪಯುಕ್ತವಾದದ್ದು. ?ಜೀವಕ್ಕೆ ತಂಪು ಜುಟ್ಟಿಗೆ ಭದ್ರ? ಎಂದು ಗ್ರಾಮೀಣ ಜನರು ಇದನ್ನು ವ್ಯಾಖ್ಯಾನಿಸುತ್ತಾರೆ.

ತೆಲಾಂಗಣ ಸರ್ಕಾರ ಐದು ವರ್ಷಗಳ ಹಿಂದೆ "ರಾಜ್ಯಪುಷ್ಪ" ಎಂದು ಘೋಷಣೆ ಮಾಡಿದೆ. ತೆಲಾಂಗಣದ ಜನರಲ್ಲಿ ತಂಗಡಿ ಗಿಡ ಎಷ್ಟು ಪವಿತ್ರ ಹಾಗು ಪ್ರಾಮುಖ್ಯತೆ ಪಡಿದಿದೆ ಎಂದರೆ "ಬದುಕಮ್ಮ ಪಂಡುಗ" ಹಬ್ಬವೆ ಸಾಕ್ಷಿ.ಈ ಹೂವುಗಳು ಇಲ್ಲದೆ ಹಬ್ಬವೆ ಇಲ್ಲಾ....!

ಉಪಯೋಗ ಹೇಗೆ : ಹಳದಿ ಬಣ್ಣದ ಹೂವುಗಳ ದಳಗಳನ್ನು ಬಿಡಿಸಿ ಅವುಗಳನ್ನು ನೀರಿನಲ್ಲಿ ತೊಳೆದು ಬೆಳಿಗ್ಗೆ ಎದ್ದ ನಂತರ ಖಾಲಿ ಹೊಟ್ಟೆಯಲ್ಲಿ 5 ಅಥವಾ 6 ದಳಗಳನ್ನು ಪ್ರತಿ ದಿನ ತಿನ್ನಬೇಕು. ಅಲ್ಲದೇ ಚಿಕ್ಕ ಮಕ್ಕಳಿಗೆ ಕೆಮ್ಮು, ನೆಗಡಿಯಾದರೆ ಹಾಲಿನಲ್ಲಿ ಈ ಹೂವಿನ ದಳವನ್ನು ಹಾಕಿ ಕುಡಿಸಿದರೆ ಮಕ್ಕಳ ಬಹಳ ದಿನಗಳ ಕೆಮ್ಮು ಹಾಗೂ ನೆಗಡಿ ಗುಣಮುಖವಾಗುತ್ತದೆ.

ಈ ಗಿಡದ ಚಕ್ಕೆಯನ್ನು ಅಡಕೆಯ ಬದಲಾಗಿ ಎಲೆಯೊಂದಿಗೆ ತಾಂಬೂಲದ ಜೊತೆಯಲ್ಲಿ ಜಗಿಯಲು ಈ ಹಿಂದೆ ಹಿರಿಯರು ಬಳಸುತ್ತಿದ್ದರು. ಈಗಲು ಕೆಲವರು ಅಡಿಕೆ ಬೇಯಿಸುವ ಸಂದರ್ಭದಲ್ಲಿ ತಂಗಡಿ ಚೆಕ್ಕೆ ಹಾಕಿ ಬೇಯಿಸುತ್ತಾರೆ. ದೇಹದಲ್ಲಿ ಉಷ್ಣಾಂಶ ಹೆಚ್ಚಾಗಿ ಕೈ, ಕಾಲು, ಕಣ್ಣು ಉರಿಯಲು ಪ್ರಾರಂಭವಾದಾಗ ಬೇಯಿಸಿದ ಹರಳೆಣ್ಣೆ ತಲೆಗೆ ಹಚ್ಚಿ ತಂಗಡಿ ಸೊಪ್ಪನ್ನು ತಲೆಗೆ ಕಟ್ಟಿಕೊಂಡರೆ ಸಾಕು. ದೇಹದ ಉಷ್ಣಾಂಶ ಕಡಿಮೆಯಾಗಿ ಸಮತೋಲನವಾಗುತ್ತದೆ. ಇದನ್ನು ಗ್ರಾಮೀಣ ಭಾಗದಲ್ಲಿ ಇಂದಿಗೂ ಕೆಲವರು ರೂಢಿಸಿಕೊಂಡು ಬಂದಿದ್ದಾರೆ. ಆದರೆ ಅನೇಕರಿಗೆ ತಂಗಡಿ ಗಿಡ, ಹೂವು, ಸೊಪ್ಪು ಹಾಗೂ ಚೆಕ್ಕೆಯ ಮಹತ್ವ ತಿಳಿದಿಲ್ಲ .

ಗ್ರಾಮೀಣ ಭಾಗದಲ್ಲಿನ ರೈತರು, ಎತ್ತುಗಳ ಕೆಳಗೆ ಗೊಬ್ಬರದೊಂದಿಗೆ ತಂಗಡಿ ಗಿಡಗಳನ್ನು ಹಾಕಿ ಮಲಗಲು ಬಿಡುತ್ತಿದ್ದರು. ಇದರಿಂದ ಗಂಜಲ ಎತ್ತುಗಳಿಗೆ ಮೆತ್ತಿಕೊಳ್ಳದಂತೆ ನೋಡಿಕೊಳ್ಳುತ್ತಿದ್ದರು. ದನಗಳ ದೇಹದಲ್ಲಿ ಚರ್ಮ ಕಾಯಿಲೆಗಳಿದ್ದರೂ ಈ ಗಿಡದಲ್ಲಿನ ಔಷಧಿಯ ಗುಣಗಳಿಂದಾಗಿ ವಾಸಿಯಾಗುತ್ತಿತ್ತು. ಈ ಗಿಡದ ಎಲೆಗಳ ಎರಡು ಬದಿಯಲ್ಲಿ 10 ಕಿರುಪತ್ರಗಳು ಅಭಿಮುಖವಾಗಿ ಜೋಡಣೆಗೊಂಡಿದ್ದು ಪ್ರತಿ ಶಾಖೆಯ ತುದಿಯಲ್ಲಿ 5 ದಳಗಳಿಂದ ಕೂಡಿದ ಹಳದಿ ಬಣ್ಣದ ಆಕರ್ಷಕ ಹೂವುಗಳು ಗೊಂಚಲುಗಳಲ್ಲಿ ಸಮಾವೇಶಗೊಂಡಿರುತ್ತವೆ. ಸುಮಾರು 7 ರಿಂದ 11 ಸೆಂಟಿಮೀಟರ್ ಉದ್ದದ ಹಸಿರು ಬಣ್ಣದ ನೀಳ,ದ ತೆಳುವಾದ ಕಾಯಿ ಗೊಂಚಲುಗಳಲ್ಲಿ ಕಾಣಸಿಗುತ್ತವೆ.

ತಾಜಾ ತಂಗಡಿ ಹೂವುಗಳನ್ನು ತಂದು, ನುಣ್ಣಗೆ ಅರೆದು, ಅದಕ್ಕೆ 2 ಚಮಚ ಗಟ್ಟಿಯಾದ ಮೊಸರು, ಚಿಟಿಕೆ ಅರಸಿಣ ಸೇರಿಸಿ, ಚೆನ್ನಾಗಿ ಮಿಶ್ರಣಮಾಡಿ, ಮುಖಕ್ಕೆ ಲೇಪನಮಾಡಿ, ಅರ್ಧ ಗಂಟೆ ಬಿಟ್ಟು ಮುಖವನ್ನು ಉಗುರು ಬೆಚ್ಚಗಿನ ನೀರಲ್ಲಿ ತೊಳೆದುಕೊಂಡರೆ, ಮೊಡವೆ, ಕಪ್ಪು ಕಲೆಗಳು, ಮಚ್ಚೆಗಳು ಮಾಯವಾಗಿ, ಮುಖದ ಚರ್ಮ ಮೃದುವಾಗಿ ಅದ್ಭುತವಾದ ಕಾಂತಿಯಿಂದ ಹೊಳೆಯುತ್ತದೆ. 100ಗ್ರಾಂ ತಂಗಡಿ ಹೂವುಗಳನ್ನು ತಂದು ಶುಭ್ರಗೊಳಿಸಿ, 250ಟಟ ಶುದ್ಧ ಕೊಬ್ಬರಿ ಎಣ್ಣೆಯಲ್ಲಿ ಹಾಕಿ, ಒಲೆಯಮೇಲಿಟ್ಟು ಚೆನ್ನಾಗಿ ಕುದಿಸಿ, ಉಗರು ಬೆಚ್ಚಗಾದಾಗ, ತಲೆಕೂದಲಿನ ಬುಡಕ್ಕೆ ಮಸಾಜ್ ಮಾಡಿಕೊಂಡರೆ, ತಲೆಯಲ್ಲಿನ ಹೊಟ್ಟು (ಜಚಿಟಿಜಡಿಣಜಿಜಿ) ನವೆ ಮಾಯವಾಗುತ್ತೆ. ತಲೆಕೂದಲು ಕಪ್ಪುಗೆ ಸೊಂಪಾಗಿ ಬೆಳೆಯುತ್ತೆ.

ದೇಹದಲ್ಲಿ ಮೂಳೆಮುರಿತವಾದಾಗ, ತಂಗಡಿ ಎಲೆಗಳನ್ನು ತಂದು ಅದಕ್ಕೆ ಕೋಳಿಮೊಟ್ಟೆಯ ಬಿಳಿಯಭಾಗ ಸೇರಿಸಿ, ನುಣ್ಣಗೆ ಅರೆದು ಮೂಳೆ ಮುರಿದಕಡೆ ಲೇಪನಮಾಡಿ, ಹತ್ತಿಬಟ್ಟೆಯಿಂದ ಕಟ್ಟುಕಟ್ಟಿದರೆ, ನೋವು, ಊತ ನಿವಾರಣೆಯಾಗಿ ಮುರಿದ ಮೂಳೆ ಬೇಗನೆ ಕೂಡಿಕೊಳ್ಳುತ್ತೆ.

ದಿನವು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ, ಹತ್ತರಿಂದ ಹದಿನೈದು ಹೂವಿನ ದಳಗಳನ್ನು ಬಾಯಲ್ಲಿ ಹಾಕಿಕೊಂಡು ಜಗಿದು ತಿನ್ನುತ್ತಾ ಬಂದರೆ ಮಧುಮೇಹಿಗಳ ರಕ್ತದಲ್ಲಿನ ಸಕ್ಕರೆ ಪ್ರಮಾಣ (ಛಟಿಂಜ ಣಂಚಿಡಿ) ಕಡಿಮೆಯಾಗುವುದಲ್ಲದೆ, ಹತೋಟಿಯಲ್ಲಿರುತ್ತೆ.ಬಹುಮೂತ್ರ ರೋಗವು ಸಹ ಹತೋಟಿಗೆ ಬರುತ್ತೆ.ಮಲಬದ್ಧತೆ ಸಹ ದೂರವಾಗುತ್ತೆ.

ತಂಗಡಿ ಮೊಗ್ಗು, ಬೀಜ ತೆಗೆದ ಬೆಟ್ಟದ ನೆಲ್ಲಿಕಾಯಿ, ನೇರಳೆ ಬೀಜ, ನೆರಳಲ್ಲಿ ಒಣಗಿಸಿ, ಕುಟ್ಟಿ ಪುಡಿಮಾಡಿ, ವಸ್ತ್ರಾಗಾಲಿತ ಚೂರ್ಣ ಮಾಡಿಟ್ಟುಕೊಂಡು, ದಿನವು ಬೆಳಿಗ್ಗೆ ಸಂಜೆ ಉಗರು ಬೆಚ್ಚಗಿನ ನೀರಲ್ಲಿ 1 ಚಮಚ ಕಲಸಿ ಕುಡಿಯುತ್ತಿದ್ದರೆ, ಮಧುಮೇಹ ಹತೋಟಿಗೆ ಬರುತ್ತೆ.

ತಂಗಡಿ ಹೂವಿನ ಜೊತೆಗೆ ಬೆಳ್ಳುಳ್ಳಿ ಇಣಕು ಸೇರಿಸಿ ದಿನವು ಜಗಿದು ತಿನ್ನುತ್ತಿದ್ದರೆ ಪುರುಷರಲ್ಲಿ ವೀರ್ಯಾಣು ವೃದ್ಧಿಯಾಗಿ, ನಪುಂಷಕತ್ವ ದೂರವಾಗುತ್ತೆ. ಹೊಟ್ಟೆಯಲ್ಲಿ ಜಂತು ಹುಳುಗಳಿದ್ದರೆ ಸಾಯುತ್ತವೆ.

10–12 ತಂಗಡಿ ಮೊಗ್ಗುಗಳನ್ನು ಚೆನ್ನಾಗಿ ನುಣ್ಣಗೆ ಅರೆದು, ಅದಕ್ಕೆ ಚಿಟಿಕೆ ಅತಿಮಧುರ ಚೂರ್ಣ ಸೇರಿಸಿ, ನುಣ್ಣಗೆ ಅರೆದು, ಗುಳಿಗೆಗಳನ್ನು ಮಾಡಿ, ನೆರಳಲ್ಲಿ ಒಣಗಿಸಿ, ದಿನವು ಬೆಳಿಗ್ಗೆ ಸಂಜೆ ಒಂದೊಂದು ಮಾತ್ರೆ ನುಂಗಿ, ಅದರ ಮೇಲೆ ಒಂದು ಲೋಟ ಹಸುವಿನ ಹಾಲು ಕುಡಿಯುತ್ತಾ ಬಂದರೇ ಧಾತು ವೃದ್ಧಿಯಾಗಿ ದೇಹಕ್ಕೆ ಅಪಾರ ಶಕ್ತಿಬರುತ್ತೆ. ಮಕ್ಕಳಿಗೆ ಕಿಬ್ಬೊಟ್ಟೆಯಲ್ಲಿ ನೋವು ಕಾಣಿಸಿಕೊಂಡಾಗ, ಮಜ್ಜಿಗೆಯಲ್ಲಿ ಕಾಂಡದ ತೊಗಟೆ ಅಥವಾ ಬೇರಿನ ಗಂಧ ತೇಯ್ದು, ಕಿಬ್ಬೊಟ್ಟೆಯ ಸುತ್ತ ಲೇಪನ ಮಾಡಿದರೆ ಶೀಘ್ರ ಶಮನವಾಗುತ್ತೆ. ಒಂದು ಪಾತ್ರೆಯಲ್ಲಿ 250ಟಟ ನೀರು ಹಾಕಿ, 10–15 ತಂಗಡಿ ಹೂವುಗಳು, ಚಿಟಿಕೆ ಜೀರಿಗೆ ಐದಾರು ಕಾಳುಮೆಣಸು, ಚಿಟಿಕೆ ಉಪ್ಪು ಹಾಕಿ, ಚೆನ್ನಾಗಿ ಕುದಿಸಿ, 100ಟಟ ಆದಾಗ ಕೆಳಗಿಳಿಸಿ, ಉಗರು ಬೆಚ್ಚಗಾದಾಗ ಸೋಸಿಕೊಂಡು, 50ಟಟ ಕಷಾಯಕ್ಕೆ 1 ಚಮಚ ಜೇನುತುಪ್ಪ ಕಲಸಿ ಕುಡಿದರೆ, ಕೆಮ್ಮು ದಮ್ಮು ಕಫ, ನೆಗಡಿ, ಗಂಟಲು ನೋವು ನಿವಾರಣೆಯಾಗುತ್ತೆ. ಕಷಾಯ ಸೇವನೆಯಿಂದ ದೇಹ ತಂಪಾಗುತ್ತೆ. ದೇಹದಲ್ಲಿನ ಕಲ್ಮಶಗಳನ್ನು ಹೊರಹಾಕುತ್ತೆ.ಇದು ತುಂಬಾ ಅದ್ಭುತವಾದ ಪಾನೀಯ.






ತಂಗಡಿ ಚಿಗುರು ಎಲೆಗಳು ತಂದು, ಅದಕ್ಕೆ ಚಿಟಿಕೆ ಅರಸಿಣ, ಉಪ್ಪು ಸೇರಿಸಿ ನುಣ್ಣಗೆ ಅರೆದು, ಗಾಯ, ಬಾವು, ವ್ರಣದ ಮೇಲೆ ಲೇಪನ ಮಾಡಿದರೆ, ಶೀಘ್ರ ಗುಣವಾಗುತ್ತೆ. ಎಲೆಗಳಿಂದ ಕಷಾಯ ಮಾಡಿ ಕುಡಿದರೆ ಹೊಟ್ಟೆಯಲ್ಲಿನ ಜಂತುಹುಳುಗಳು ಸಾಯುತ್ತವೆ. ಮೂತ್ರಕೋಶ ವ್ಯಾಧಿಗಳು, ಮೂತ್ರದಲ್ಲಿನ ಹುರಿ, ನೋವು ವಾಸಿಯಾಗುತ್ತೆ. ತಂಗಡಿ ಬೀಜ, ನೇರಳೆ ಬೀಜ, ಮೆಂತ್ಯಕಾಳು ಸಮನಾಗಿ ತೆಗೆದುಕೊಂಡು, ನೆರಳಲ್ಲಿ ಒಣಗಿಸಿ ಪುಡಿಮಾಡಿ, ವಸ್ತ್ರಾಗಾಲಿತ ಚೂರ್ಣ ಮಾಡಿಟ್ಟುಕೊಂಡು, ಬೆಳಿಗ್ಗೆ ಸಂಜೆ ಊಟಕ್ಕೆ ಅರ್ಧ ಗಂಟೆ ಮೊದಲು 1 ಚಮಚ ಚೂರ್ಣವನ್ನು ಉಗರು ಬೆಚ್ಚಗಿನ ನೀರಲ್ಲಿ ಕಲಸಿ ಕುಡಿಯುತ್ತಿದ್ದರೆ ಮಧುಮೇಹ ಹತೋಟಿಯಲ್ಲಿರುತ್ತೆ. ತಂಗಡಿ ಹೂವುಗಳಲ್ಲಿ ರಸವನ್ನು ತೆಗೆದು, 2 ಚಮಚ ರಸಕ್ಕೆ1 ಚಮಚ ಕೆಂಪು ಕಲ್ಲುಸಕ್ಕರೆ ಕಲಸಿ ಸೇವಿಸಿದರೆ, ಉಷ್ಣತೆಯಿಂದ ಕೂಡಿರುವ ದೇಹವನ್ನು ತಂಪಾಗಿಸಿ, ಆಲಸ್ಯ ದೂರಮಾಡುತ್ತೆ.ಅತಿ ಮೂತ್ರ ಸಹ ಹತೋಟಿಗೆ ಬರುತ್ತೆ. ಜೇನುಹುಳು, ಚೇಳು ಕಚ್ಚಿದ ಕಡೆ ಇದರ ಎಲೆಗಳ ರಸವನ್ನು ಲೇಪಿಸಿದ್ರೆ, ವಿಷ ನಿವಾರಣೆಯಾಗುತ್ತೆ. ಪಾದದಲ್ಲಿ ಬಿರಕು ಬಿಟ್ಟಾಗ, ತಂಗಡಿ ಎಲೆಗಳನ್ನು ಮಜ್ಜಿಗೆಯಲ್ಲಿ ನುಣ್ಣಗೆ ಅರೆದು ಲೇಪನ ಮಾಡಿದರೆ ಬೇಗನೆ ಕೂಡಿಕೊಂಡು ನೋವು ನಿವಾರಣೆಯಾಗುತ್ತೆ.

ಐದಾರು ತಂಗಡಿ ಚಿಗರು ನುಣ್ಣಗೆ ಅರೆದು, ಮೊಸರಲ್ಲಿ ಕಲಸಿ ಬೆಳಿಗ್ಗೆ ಸಂಜೆ ಸೇವಿಸಿದರೆ ಅತಿಸಾರಭೇದಿ ಬೇಗನೆ ಗುಣವಾಗುತ್ತೆ. ತಂಗಡಿ ಹೂವುಗಳನ್ನು ಶೇಖರಿಸಿ ಅದಕ್ಕೆ ಸಕ್ಕರೆ, ಜೇನುತುಪ್ಪ ಕಲಸಿ ಸೇವಿಸುತ್ತಿದ್ದರೆ, ಉರಿಮೂತ್ರ ರೋಗ ನಿವಾರಣೆಯಾಗುತ್ತೆ.



ಸೌಮ್ಯಸನತ್

## ಪದಬಂಧ



### ಎಡದಿಂದ ಬಲಕ್ಕೆ.....

1. ಹಗಲು ಮುಟ್ಟಿ ನೋಡಿಕೊಂಡು ಕಳ್ಳ ಸಿಕ್ಕಿ ಹಾಕಿಕೊಂಡದ್ದು, ಈ ತರಕಾರಿಯ ಪ್ರಭಾವದಿಂದ.5)
5. ಕಾಯಿ ಇದ್ದಾಗ ತರಕಾರಿಯಾಗಿ, ಹಣ್ಣಾದಾಗ ದೇವರ ಪೂಜೆಗೆ ಅತ್ಯವಶ್ಯಕವಾಗಿ ಬೇಕಾದ ಇದು ತಿರುಗಿ ನಿಂತಿದೆ.....(2)
6. ಸಮುದ್ರದ ಉಪ್ಪಿನ ಜೊತೆ ತುಂಬ ರುಚಿ ಕೊಡುವ ಇದು ಬೆಟ್ಟದ ಮೇಲೆ ತಿರುಗಿ ನಿಂತಿದೆ(2)
7. ಬೆಳೆದು ಬಿದಿರಾಗುವ ಇದು ಎಳೆಯದಿರುವಾಗ ಈ ಹೆಸರಿನ ತರಕಾರಿ.....(3)
8. ಉಪ್ಪಿನ ಕಾಯಿಯಾಗುವ ಇದು, ಹುಡುಗಿಯರು ಧರಿಸುವ ಉಡುಗೆಯಂತಿದೆ.....(2)
9. ಹೆಚ್ಚಿನ ಅಡುಗೆಗೆ ರುಚಿ, ಅಂದ ಕೊಡುವ ಇದು, ಮೂಲದಲ್ಲೇ ದೀರ್ಘಗೊಂಡಿದೆ....(4)
12. ಮಲೆನಾಡು/ಕರಾವಳಿಗರ ಸುಪ್ರಸಿದ್ಧ ಪತ್ರೊಡೆಗೆ ಇದೇ ಮೂಲ ವಸ್ತು..... (2)
13. ಸ್ತ್ರೀಯರ ನೀಳವಾದ ಬೆರಳಿನಂತಿದೆಯೆ? ಈ ತರಕಾರಿ.....(2)
14. ಅಡುಗೆಗೆ ತರಕಾರಿಯಾಗಿಯೂ, ಹಣ್ಣಾದ ಮೇಲೂ ರುಚಿಯಾದ ತಿಂಡಿಗೂ ಒದಗುವ, ತಿರುಗುಮುರುಗಾದ ಇದು ಹಸುಗಳಿಗೂ ಇಷ್ಟ....(3)
15. ಹಿಂದಿಯವರ ವೀಳ್ಯದೆಲೆಯೆ ಇದು?....(2)
16. ಈ ತರಕಾರಿಯಿಂದ ಮಧುಮೇಹಿಗಳಿಗೆ ಜಾಸ್ತಿ ಉಪಯೋಗವೇ.....(3)
17. ತುಂಬ ಜನರ/ಮಕ್ಕಳ ಇಷ್ಟದ ತರಕಾರಿ.....(4)

### ಮೇಲಿನಿಂದ ಕೆಳಕ್ಕೆ.....

2. 'ನೇರಳೆ/ಹಸಿರು ಬಣ್ಣದ ಮುಖಕ್ಕೆ ಹಸಿರು ಟೋಪಿ' ಹಾಕಿ ಕೊಂಡಿರುವ ತರಕಾರಿಯಿದು....(3)
3. ......ಇದು ನಿಮ್ಮಿಷ್ಟದ ಪದ...... (4)
4. ಬಿಡಿಸಿದಷ್ಟೂ ಪದರ ಬಿಡಿಸಿಕೊಳ್ಳುವ ತರಕಾರಿಯಿದು.....(4)
5. ಬಳ್ಳಿಯಂತೆ 'ಕೆಳಗಿನಿಂದ ಮೇಲೆ' ಹಬ್ಬಿದ, ಈ ತರಕಾರಿ ಬಳೆ ಹಾಕಿಕೊಂಡಿದೆ......(3)
10. ಕಲಸು ಮೇಲೋಗರವಾಗಿರುವ ಸೊಪ್ಪು..... (3)
11. ಬಳ್ಳಿಗೆ, ಚಪ್ಪರ ಹಾಕಿ ಬೆಳೆಯುವ ತರಕಾರಿಯಿದು....(2)
14. ಭೂಮಿಯ ಅಡಿಯಲ್ಲಿ ಬೆಳೆದದ್ದು, ಅಡಿಮೇಲಾಗಿದೆ.....(3)
15. ಲಕ್ ಇರುವವರು ತಿನ್ನೋ ಸೊಪ್ಪೇ ಇದು?.... (3)
16. ಗೋ ಮಾತೆಯ ಅಮೃತವಿದು.....(2)



ಜ್ಯೋತಿ ರಾಜೇಶ್

# ಎಷ್ಟು ಕಷ್ಟವೋ...ಹೊಂದಿಕೆಯೆಂಬುದು ನಾಲ್ಕು ದಿನದ ಈ ಬಾಳಿನಲಿ.....!!

'ಅಲ್ಲಪ್ಪಾ.....ನೀನೇಕೆ....ಅವನನ್ನು ಮೊದಲಿನಿಂದಲೂ ಮಾತನಾಡಿಸುತ್ತಿಲ್ಲ. ಮಾತನಾಡಿಸುವುದಿರಲೀ, ಅವನ ಮುಖ ಕಂಡರೆ ಆಗದಂತೆ ಅಂತರ ಕಾಯ್ದುಕೊಂಡೇ ಬಂದಿದ್ದೀಯಾ...? ನಿನಗೂ ಅವನಿಗೂ ಏನಾದರೂ ದುಡ್ಡು, ಒಡವೆ ,ಆಸ್ತಿ, ಪ್ರೀತಿ....ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದಂತೆ ಎಂದಾದರೂ ವಾದ –ವಿವಾದ, ಇಲ್ಲವೇ ಕಿರಿಕ್ಕು ಆಗಿತ್ತಾ..? ಇಷ್ಟು ವರ್ಷದಿಂದ ನೀವೆಲ್ಲಾ ತುಂಬಾ ಹತ್ತಿರವಿದ್ದರೂ ದೂರವಿದ್ದಂತೆ ಏಕಿದ್ದೀರಿ....? ನನಗೆ ಅರ್ಥವಾಗುತ್ತಿಲ್ಲ...!

ಇವೇ ಮೊದಲಾದ ಪ್ರಶ್ನೆಗಳನ್ನು ನನ್ನ ಆತ್ಮೀಯನೊಬ್ಬನಿಗೆ ಒಮ್ಮೆ ಕೇಳಿದ್ದೆ. ಅದಕ್ಕೆ ಅವನಿಂದ ಬಂದ ಉತ್ತರ...

" ಛೇ ಹಾಗೇನಿಲ್ಲಪ್ಪಾ..... ನಮ್ಮಿಬ್ಬರ ನಡುವೆ ಅಂಥಾದ್ದೇನೂ ಇಲ್ಲ.!

ಹಾಗಾದಾರೆ ಎಲ್ಲರಂತೆ ಅವನನ್ನೇಕೆ ನೀನು ನೆಟ್ಟಗೆ ಮಾತನಾಡಿಸದೇ ಹಲವು ವರ್ಷಗಳಿಂದಲೂ ಡಿಸ್ಟೆನ್ಸ್ ಮೇಂಟೇನ್ ಮಾಡ್ತಾ ಇದೀಯಾ..?

ಅಚ್ಚರಿಯಿಂದ ಕೇಳಿದ್ದೆ.

ಅದಕ್ಕೂ ಅವ ಹೇಳಿದ್ದು ". ಏನಿಲ್ಲ....ಹಾಗೇ ಸುಮ್ನೇ...!

ಅವನ ಮುಗುಳುನಗೆಯೇ ಎಲ್ಲದಕ್ಕೂ ಉತ್ತರವಾಗಿತ್ತು.!

ಅರೆ...ಇವನಜ್ಜಿ..... ಅವನೊಂದಿಗೆ ಯಾವ ಬೇಡದ ವ್ಯವಹಾರವೂ ಇಲ್ಲ, ಎಂತಹಾ ಕಿರಿಕ್ಕೂ ಇಲ್ಲ ಮನಸ್ತಾಪವೂ ಇಲ್ಲ....ಹಾಗಿದ್ದ ಮೇಲೆ ಎಲ್ಲರನ್ನೂ ಆತ್ಮೀಯವಾಗಿ ಮಾತನಾಡಿಸಿ ಅವನ ಸನಿಹದಲ್ಲಿರುವ ಈ ಮನುಷ್ಯ ಅವನನ್ನು ಮಾತ್ರ ಯಾಕೆ ಹೀಗೆ ದೂರ ಇಟ್ಟು ಅವನನ್ನು ಕಂಡರೆ ಆಗದಂತೆ ಇದ್ದಾನೆ.....?

ಈ ಪ್ರಶ್ನೆಗೆ ಕೊನೆಗೂ ಸ್ಪಷ್ಟ ಉತ್ತರ ಸಿಗದೇ ತಲೆಯೊಳಗಿನ ಹುಳು ಕೊರೆಯುತ್ತಲೇ ಇತ್ತು. ಅದನ್ನು ಅಲ್ಲಿಗೇ ಬಿಟ್ಟು ಸುಮ್ಮನಾಗಿದ್ದೆ. ಆದರೆ ಹಾಗೆಯೇ ಈ ವಿಚಾರದ ಸ್ವಲ್ಪ ಆಳಕ್ಕಿಳಿದು ನೋಡಿದಾಗ....

ನಮ್ಮಲ್ಲೂ ಸಾಕಷ್ಟು ಜನರ ಮನೋಭಾವ ಹೀಗೆಯೇ ಇದ್ದಿರಬಹುದಲ್ಲವೇ...? ಅಂದರೆ ಅವರಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ... ಕಾರಣವಿದ್ದೋ... ಇಲ್ಲದೆಯೋ... ನಮ್ಮದೇ ಸ್ನೇಹ ವಲಯದಲ್ಲಿ, ಬಂಧುಗಳಲ್ಲಿ ನೆಂಟರಿಷ್ಟರಲ್ಲಿ ಯಾರೋ ಒಬ್ಬಿಬ್ಬರು ನಮಗೆ ತೀರ ಹತ್ತಿರದಲ್ಲಿದ್ದರೂ ಅವರನ್ನು ಎಲ್ಲರಂತೆ ನಾವು ಮಾತನಾಡಿಸುವುದಾಗಲೀ ಅಥವಾ ಕೊನೇಪಕ್ಷ ಮುಖ ಕಂಡರೆ ಒಂದು ಸ್ಮೈಲ್ ಕೊಟ್ಟು ಹೇಗಿದ್ದೀರಿ ಎನ್ನುವುದಾಗಲೀ ಮಾಡಲು ಮನಸು ಬರೋಲ್ಲ. ಹತ್ತು ಜನರ ಗುಂಪಿನಲ್ಲಿ ಒಂಭತ್ತು ಜನರನ್ನು ಆತ್ಮೀಯವಾಗಿ ಮಾತನಾಡಿಸುವ ಮನಸ್ಸು ಈ ಥರದ ಒಬ್ಬಿಬ್ಬರನ್ನು ಹತ್ತಿರ ಸುಳಿಯಲು ಸಹಾ ಬಿಡದು..... ಹೌದು.. ಹೀಗೇಕೆ...?

ಇನ್ನೂ ಕೌತುಕವೆಂದರೆ,

ಅವರೊಂದಿಗೆ ಜಗಳವಾಡಿಲ್ಲ, ದುಡ್ಡು ಕಾಸಿನ ಡೀಲಿಂಗ್ಸ್ ಇಲ್ಲ, ಎಂಥಾ ಕಲಹಗಳೂ ಇಲ್ಲ. ಆದರೂ ಅವರಿಂದ ನೆರಳು ಕೂಡಾ ಸೋಕದಂತೆ ಅಂತರ ಕಾಪಿಟ್ಟುಕೊಂಡೇ ಬಂದಿರುತ್ತೇವೆ..... ಇದೊಂಥರಾ ವಿಚಿತ್ರ ಆದರೂ ಸತ್ಯವಲ್ಲವೇ..?



ಒಮ್ಮೆ ನಿಮ್ಮ ಮನಸನ್ನು ಕೇಳಿ ನೋಡಿ..?

ಹೊರಗಿನ ಫ್ರೆಂಡ್ಸ್, ಕೊಲೀಗ್ಸ್ ಗಳ ಕಥೆ ಬಿಟ್ಹಾಕಿ. ನಿಮ್ಮ ಹತ್ತಿರದ ಬಂಧು ಬಳಗ, ಕೌಟುಂಬಿಕ ವಲಯದಲ್ಲೇ ಒಂದಷ್ಟು ಜನರನ್ನು ಹಾಗೇ ಕಣ್ಣಮುಂದೆ ತಂದುಕೊಳ್ಳಿ. ಅದರಲ್ಲಿ ಒಂದಿಬ್ಬರನ್ನು ಕಂಡರೆ ನಿಮ್ಮ ಮನಸ್ಸು ನಿಷ್ಕಾರಣವಾಗಿ ಅವರನ್ನು ದೂರ ಇಡಲೇ ಬಯಸುತ್ತದೆ. ಅವರ ಬಗ್ಗೆ ಯಾವೊಂದು ವಿಷಯವನ್ನೂ ತಿಳಿಯಲು ಕಿಂಚಿತ್ತೂ ಆಸ್ಥೆ ಇರದು. ಹಾಂ.....ಎಗೈನ್....ಇದಕ್ಕೆ ನಿರ್ದಿಷ್ಟವಾದ ಕಾರಣ ಇರೋಲ್ಲ..!

ಕೆಲವರ ಬಗೆಗೆ ಇನ್ನೊಂದು ರೀತಿಯಲ್ಲೂ ನಮ್ಮ ಮನಸ್ಸು ವರ್ತಿಸುತ್ತದೆ. ಅಂದರೆ , ಆ ವ್ಯಕ್ತಿಯ ಯಾವುದೇ ರೀತಿಯ ಏಳಿಗೆಯನ್ನು ಸಹಿಸಲು ಸಾಧ್ಯವಿರದಷ್ಟು ಹೆಜ್ಜೆಹೆಜ್ಜೆಗೂ ಒಳಗೊಳಗೇ ದ್ವೇಷಿಸಲು ತೊಡಗುತ್ತದೆ. ಅದನ್ನು ಕೇವಲ ಅಸೂಯೆ ಎನ್ನಲಾಗದು. ವಿಸ್ಮಯವೆಂದರೆ ಅದೇ ಮನಸ್ಸು ಇತರೆ ಪರಿಚಿತರ ಸ್ನೇಹಿತರು ತಮ್ಮ ಬದುಕಿನಲ್ಲಿ ಸಾಧಿಸಿದ ಎಂತಹಾ ಏಳಿಗೆಯನ್ನಾದರೂ ವಿಶಾಲ ಮನಸ್ಸಿನಿಂದ ಸಂಭ್ರಮಿಸುತ್ತಲೇ ಇರುತ್ತೆ. ಅಂದರೆ ಮನಸಿನ ಈ ನೆಗೆಟೀವ್ ಅಪ್ರೋಚು ಕೇವಲ ಒಂದಿಬ್ಬರ ವಿಷಯದಲ್ಲಿ ಮಾತ್ರವೇ.ಅಂಥವರಿಗೆ ಸಂಬಂಧಿಸಿದ ಎಂತಹ ಖುಷಿಯ ವಿಚಾರವನ್ನೂ ಕಹಿಯಾಗಿಯೇ ಸ್ವೀಕರಿಸುತ್ತೆ...! ವೆರೀ ಪೆಕ್ಯೂಲಿಯರ್ ಅಲ್ವಾ..?

ಎಲ್ಲಕ್ಕಿಂತ ತುಂಬಾ ಅಚ್ಚರಿಯ ಸತ್ಯ ಏನುಗೊತ್ತಾ....? ಈ ತರಹದ ಕಾಂಪ್ಲೆಕ್ಸಿಟಿ ಅನ್ನೋದು ಒಂದೇ ಕುಟುಂಬದ ಕೆಲ ಸದಸ್ಯರಲ್ಲೇ ಎಲ್ಲೋ ಒಂದು ಕಡೆ ಆಳವಾಗಿ ಸುಪ್ತವಾಗಿರಬಲ್ಲದು. ಅಂದರೆ ಕೆಲವು ಅಣ್ಣ ತಮ್ಮಂದಿರೋ, ಅಕ್ಕ ತಂಗಿಯರೋ ಅಥವಾ ಕಸೀನ್ಸ್ ನಡುವೆಯೋ... ವಿನಾಕಾರಣ ಮನಸ್ಸುಗಳು ಒಂದು ನಿರ್ದಿಷ್ಟ ಅಂತರದಲ್ಲೇ ಇರುತ್ತವೆ. ಮೇಲ್ನೋಟಕ್ಕೆ ಎಲ್ಲೋ ಎಂದೋ ಒಮ್ಮೆ ಎದುರು ಬದುರಾಗಿ ನಿಂತಾಗ ಅನಿವಾರ್ಯವಾಗಿ ಬಲವಂತವಾಗಿ ಮೊಗದಲ್ಲಿ ನಗು ತುಂಬಿಕೊಂಡು ತಲೆ ಅಲ್ಲಾಡಿಸಿ, ಯಾಂತ್ರಿಕವಾಗಿ ಮುಂದೆ ಹೋಗುವ ಮನಸ್ಸು ಅವರನ್ನು ಮನಸಾರೆ ವಿಚಾರಿಸಲು ಬಯಸೋಲ್ಲ....! ಇದು ಯಾವ ರೀತಿಯಲ್ಲಿ ದೀರ್ಘಕಾಲ ಮುಂದುವರೆದುಕೊಂಡು ಬಂದಿರುತ್ತೆ ಅಂದರೆ ಯಾರಾದರೂ ನೋಡಿದವರ ದೃಷ್ಟಿಯಿಂದ ಇವರಿಬ್ಬರ ನಡುವೆ ಯಾವುದೋ ಗಂಭೀರವಾದ ವಿಷಯಕ್ಕೆ ವಾದವಿವಾದ , ಜಗಳ ಇದ್ದಿರಬಹುದೆಂಬ ಇಂಬು ಕೊಡುವಂತೆ ಅಂತರ ಎದ್ದು ಕಾಣುತ್ತದೆ.

ಫನ್ನೀ ಪಾರ್ಟ್ ಎಂದರೆ ....ಇದಕ್ಕೆ ಇಂಥಾದ್ದೇ ನಿರ್ದಿಷ್ಟವಾದ ಕಾರಣವೂ ಇರೋಲ್ಲ. ಇದೂ ಸಹಾ ಹಾಗೇ ಸುಮ್ಮನೇ ಅಷ್ಟೇ...!

ಇದೆಲ್ಲಾ ಇಂದು ನಿಮ್ಮೊಂದಿಗೆ ಹೇಳೋದಕ್ಕೂ ಒಂದು ಕಾರಣವಿದೆ. ಇವತ್ತು 2025 ರ ಕೊನೆಯ ದಿನ. ನಾಳೆ ಬೆಳಗಾದರೆ ನೂತನ ವರ್ಷದ ಆರಂಭ. ನಿಮ್ಮದೇ ಸ್ನೇಹಿತರ, ಬಂಧುಗಳ, ರಕ್ತ ಸಂಬಂಧಿಗಳ ಪರಿಚಿತರ ಸಹೋದ್ಯೋಗಿಗಳ ವಲಯದಲ್ಲಿ ಯಾರೊಬ್ಬರ ಕುರಿತಂತೆ ಈ ಬಗೆಯಾದ ಸುಪ್ತ ಮನೋಭಾವನೆ ನಿಮ್ಮೊಳಗೆ ನಿಷ್ಕಾರಣವಾಗಿ ಕೊಳೆಯುತ್ತಿದ್ದರೆ ಅದಕ್ಕೆ ಇಂದೇ ತರ್ಪಣ ಕೊಡುವ ಬಗ್ಗೆ ತೆರೆದ ಮನಸ್ಸಿನಿಂದ ಒಮ್ಮೆ ಯೋಚಿಸಿ ನೋಡಲು ಇದು ಹೈ ಟೈಮ್.

ಮುಕ್ತ ಮನಸಿನಿಂದ , ಪ್ರಾಮಾಣಿಕ ಭಾವದಿಂದ, ಹೊಸ ದೃಷ್ಟಿಯಿಂದ, ಅಂಥವರತ್ತ ಒಮ್ಮೆ ನೋಡಿ. ಅದಕ್ಕೂ ಮುನ್ನ ಅಂಥಾ ವ್ಯಕ್ತಿಗಳ ಬಗ್ಗೆ, ಅವರೊಂದಿಗಿನ ಮಾನವ ಸಂಬಂಧಗಳ ಬಗ್ಗೆ ನಿಮ್ಮ ಮನದೊಳಗೆ ಕಾರಣವೇ ಇಲ್ಲದೇ ಹೊದ್ದಿರಬಹುದಾದ ಕರಿ ಮುಸುಕನ್ನು ಅನಾಮತ್ತು ಸರಿಸಿ ಶುಭ್ರ ಬೆಳದಿಂಗಳಿನ ದೃಷ್ಟಿ ಹರಿಸಿ ಮನದೊಳಗೇ ಮಂಥಿಸಿ ನೋಡಿ. ಯಾವ ಘನಕಾರಣಕ್ಕಾಗಿ ಇಷ್ಟುದಿನ ಆ ಮನುಷ್ಯನ ಬಗೆಗೆ ನನ್ನ ಮನಸ್ಸು ಹೀಗೆಲ್ಲಾ ಅಂತರ ಕಾಯ್ದುಕೊಳ್ಳುವಂತೆ ಪ್ರೇರೇಪಿಸಿತ್ತೆಂಬ ಬಗ್ಗೆ ನಿಮ್ಮ ಮನಸನ್ನೇ ಒಮ್ಮೆ ಖಾರವಾಗಿ ಪ್ರಶ್ನಿಸಿ. ಅದಕ್ಕುತ್ತರವಾಗಿ ಏನಾದರೂ ಗಂಭೀರವಾದ ಕಾರಣ ಅಥವಾ ಘನ ಉದ್ದೇಶಗಳೇ ಕಾಣದಿದ್ದಲ್ಲಿ....., ಹಿಂದೆ ಮುಂದೆ ನೋಡದೇ...ಇನ್ನುಮುಂದೆ ಎಲ್ಲರಂತೆ ಅವರನ್ನೂ ಟ್ರೀಟ್ ಮಾಡಲು ಅಡಿಯಿಡುತ್ತಲೇ ಬಹುದಿನಗಳಿಂದ ಮನದೊಳಗೆ ಕೊಳೆತಿರುವ ಅವ್ಯಕ್ತ ,ಅಸಂಬದ್ಧ ಕೊಳೆಯನ್ನು ಕೊಚ್ಚಿ ಸ್ನೇಹ ಸಂಬಂಧಗಳ ದಿಕ್ಕಿನತ್ತ ನವ ಮನ್ವಂತರದ ಅಧ್ಯಾಯ ಆರಂಭಿಸಲು ನಿಧಾನದ ಹೆಜ್ಜೆ ಆರಂಭಿಸಿ.



ಹಿರಿಯೂರು ಪ್ರಕಾಶ್

ಔಜಿಥಿಣಊಜ, ಹಾಗೆ ಮಾಡುವುದರಿಂದ ಯಾವ ಸಾಧನೆ, ಸಂಪತ್ತು ಸಂಭ್ರಮಗಳಿಲ್ಲದಿದ್ದರೂ ಕೊನೇಪಕ್ಷ ಅಲ್ಲಿಯವರೆಗೂ ನಮಗರಿವಿಲ್ಲದೇ ಅಂಟಿಕೊಂಡು ಬಂದಿದ್ದ ಸಣ್ಣಪುಟ್ಟ ಬಗ್ಗಡಗಳೆಲ್ಲಾ ಮನಸಿನಿಂದ ತೊಳೆದು, ಕೊಚ್ಚಿಹೋಗಿ ಅದು ಸ್ವಲ್ಪಮಟ್ಟಿಗಾದರೂ ಹಗುರಾಗಬಲ್ಲದು. ಹಾಗೆ ಮಾಡಲು ಪ್ರತಿಷ್ಠೆಗಳೆಂಬ ರೋಡ್ ಹಂಪ್ ಗಳು ಪದೇಪದೇ ನಮ್ಮನ್ನು ಅಡ್ಡಿಪಡಿಸುತ್ತಲೇ ಇರುತ್ತವೆ. ಆದರೆ ಹಳೆಯ ನಕಾರಾತ್ಮಕ ಕಳೆಗಳನ್ನೆಲ್ಲಾ ಕಿತ್ತು ಬಿಸಾಡಿ ಹೊಸಬೆಳಕಿನ ಹೊಸ ಹಾದಿಯಲ್ಲಿ ನಿರ್ಮಲ ಮನದಿಂದ ಜೀವನಪಯಣ ಸಾಗಿಸುವುದು ನಮ್ಮ ನಮ್ಮಆರೋಗ್ಯ ಮತ್ತು ನೆಮ್ಮದಿಯ ದೃಷ್ಟಿಯಿಂದ ಬೆಟರ್.

ಹೊಸವರ್ಷದ ಹೊಸಬೆಳಕು ನಮ್ಮೆಲ್ಲರಲ್ಲೂ ಧನಾತ್ಮಕ ಚಿಂತನೆಯ ಹೊಂಗಿರಣಗಳನ್ನು ಬೀರಲಿ.

2026 ರ ಹೊಸವರ್ಷದ ಶುಭಾಶಯಗಳು.

* ಮರೆಯುವ ಮುನ್ನ *

ಕಾರಣವೇ ಇಲ್ಲದೇ ಒಬ್ಬರನ್ನು ದ್ವೇಷಿಸುವುದು, ಅವರ ಏಳಿಗೆ ಬಗೆಗೆ ಅಸೂಯೆ ಪಡುವುದು, ಅವರ ಪ್ರತೀ ನಡೆ ನುಡಿಯಲ್ಲೂ ಕೊಂಕು ಹುಡುಕುವುದು, ಅವರು ಬಿದ್ದಾಗ ಸಂಭ್ರಮಿಸುವುದು...ಇವೆಲ್ಲವೂ ಎಲ್ಲಿ ಹುಟ್ಟುತ್ತವೆಯೋ ಆ ಜಾಗವನ್ನು ಅಲ್ಲೇ ಸುಟ್ಟುಹಾಕುವ ಪ್ರಬಲ ನೆಗೆಟೀವ್ ಆಯುಧಗಳಿದ್ದಂತೆ. ಹೀಗಾಗಿ ಇವುಗಳನ್ನು ನಮ್ಮದೆ ಗೂಡಲ್ಲಿ ಎಂಟ್ರಿ ಆಗಲು ಬಿಡಬಾರದು.

ಹಾಗೆಯೇ, ಅಹಮ್ಮು, ಅಂತಸ್ತು, ಅಸೂಯೆ, ಅಕಾರಣ, ಅಗ್ಗಳಿಕೆ, ಅಸ್ಪಷ್ಟತೆ, ಅರಿವಿನ ಕೊರತೆ, ಅಜ್ಞಾನ, ಅಂಧಕಾರ......ಈ ಯಾವುದೋ ಬಲವಾದ ಕಾರಣದಿಂದಲೇ ದೂರವಾಗಿದ್ದರೂ, ಆನಂತರ ಅಂತಹ ಸಂಬಂಧ ಕಳೆದುಕೊಳ್ಳಬಾರದಿತ್ತೆಂಬ ಪ್ರಾಮಾಣಿಕ ಪಶ್ಚಾತ್ತಾಪ ನಿಮ್ಮಲ್ಲಿ ಉಂಟಾಗಿದ್ದರೆ....ಸಮಯ ವ್ಯರ್ಥ ಮಾಡದೇ ಮುಂದಡಿ ಇಟ್ಟು ಒಣಗಿದ ಸ್ನೇಹದ ಬಳ್ಳಿಗೆ ನೀವೇ ನೀರೆರೆಯಲು ಪ್ರಯತ್ನಿಸಿ.

ಸ್ನೇಹ, ಪ್ರೀತಿ, ನಂಬಿಕೆ, ಹೊಂದಾಣಿಕೆಗಳೆಂಬ ಹೊಸಬೆಳಕಿನ ಕಿರಣಗಳು ಎಲ್ಲರ ಮನೆ– ಮನಗಳನ್ನು ಬೆಳಗಲಿ.

ಪ್ರೀತಿಯಿಂದ....

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,